UNIVERSAL LIBRARY

೧ನೇ ಭಾಗ

ಚಿತ್ರರಾಮಾಯಣ.

ಬಾಲಕಾಂಡ

ಎಸ್. ಕೆ. ಲಿಂಗಣ್ಣಯ್ಯ ಬಿ. ಎ., ಆರ್ಟಿಸ್ಟ್,

ರವರಿಂದ ಬರೆಯಲ್ಪಟ್ಟು

ಬೆಂಗಳೂರು ಸಿಟಿ ವಿಶ್ವೇಶ್ವರ ಪುರದಲ್ಲಿರುವ

ಇವರ ಸ್ವಕೀಯ

ಶ್ರೀ ಕಾಂತರಾಜ ಕ್ರೋಮೋ ಲಿಥೋ ಪ್ರೆಸ್ಸಿನಲ್ಲಿ ಮುದ್ರಿಸಲ್ಪಟ್ಟಿತು.

೧೯೨೮

ಮಹನೀಯರೇ,

ಇಲ್ಲಿಗೆ ಚಿತ್ರರಾಮಾಯಣದಲ್ಲಿ ಬಾಲಕಾಂಡವು ಪೂರೈಸಿತು.

೧

ಮಾ॥ ರಾ॥ S. K. ಲಿಂಗಣ್ಣಯ್ಯನವರ ಸ॥ ಕ್ಕೆ.

ಸಾಷ್ಟಾಂಗ ನಮಸ್ಕಾರಗಳು.

ನೀವು ಭಕ್ತಿಪುರಸ್ಸರವಾಗಿ ಶ್ರೀ ಶ್ರೀ ಮಹಾಸ್ವಾಮಿಗಳವರಲ್ಲಿ ಸಮರ್ಪಿಸಲು ಕಳುಹಿಸಿಕೊಟ್ಟ ಚಿತ್ರಪಟಗಳನ್ನು ನಿಮ್ಮ ಕೋರಿಕೆಯಂತೆ ಜಗದ್ಗುರುಗಳ ಸನ್ನಿಧಾನದಲ್ಲಿ ಒಪ್ಪಿಸಲಾಗಿ ಅವುಗಳನ್ನು ಪರಾಂಬರಿಸಿ ಜಗದ್ಗುರುಗಳು ನಿಮ್ಮ ಕುಶಲತೆಗೆ ಸಂತೋಷಿಸಿರುತ್ತಾರೆ.

ಶ್ರೀಮದ್ರಾಮಾಯಣ ಬಾಲಕಾಂಡವನ್ನು ನೀವು ಚಿತ್ರರೂಪವಾಗಿ ಮುದ್ರಣ ಮಾಡಿರುವುದನ್ನು ಪರಾಂಬರಿಸಿ, ನಿಮಗೆ ಇರುವ ದೈವಭಕ್ತಿ ಮತ್ತು ಆ ಭಕ್ತಿಯನ್ನು ನೀವು ಪ್ರದರ್ಶನ ಮಾಡುತ್ತಿರುವ ರೀತಿಗೆ ಸಂತೋಷಪಟ್ಟು ನಿಮಗೆ ಇತೋಪ್ಯಧಿಕವಾಗಿ ದೇವತಾನುಗ್ರಹ ಮತ್ತು ಶ್ರೇಯಸ್ಸು ಉಂಟಾಗಲೆಂದು ಅನುಗ್ರಹ ಮಾಡಿರುವ ಅಂಶವನ್ನು ನಿಮಗೆ ಈ ಮೂಲಕ ತಿಳಿಸಲು ಅಪ್ಪಣೆ ಮಾಡಿರುತ್ತಾರೆ.

Sringeri, ಇಂತಿ, ಸಾ॥ ನಮಸ್ಕಾರಗಳು.

12—9—1928 **V. L. Narasimhaiya.**

Deputy Agent,
Sringeri Matt.

ತಾ॥ ೧೨-೭-೧೯೨೮
ಬೆಂಗಳೂರು ಸಿಟಿ.

ಎಸ್. ಕೆ. ಲಿಂಗಣ್ಣಯ್ಯ.

ವಿಷಯಸೂಚಿಕೆ.




ತಪಃಸ್ವಾಧ್ಯಾಯನಿರತಂ ತಪಸ್ವೀ ವಾಗ್ವಿದಾಂ ವರಮ್ । ನಾರದಂ ಪರಿಪಪ್ರಚ್ಛ ವಾಲ್ಮೀಕಿರ್ಮುನಿಪುಂಗವಮ್ ॥ ೧

S.R.

ಬಾಲಕಾಂಡ - ೧ನೇ ಸರ್ಗ

ಲೋಕದಲ್ಲಿ ಸಮಸ್ತಗುಣಗಳಿಂದಲೂ ಶಕ್ತಿಯಿಂದಲೂ ಕೂಡಿ ಸರ್ವಜ್ಞನಾಗುವವನು ಯಾರಾದರೂ ಇದ್ದಾರೆಂದು ವಾಲ್ಮೀಕಿಯು ನಾರದಮುನಿಗೆ ಪ್ರಶ್ನೆಮಾಡಲು, ನಾರದರು ಶ್ರೀರಾಮಾವತಾರದ ಚರಿತ್ರೆಯನ್ನೆಲ್ಲಾ ವಾಲ್ಮೀಕಿಗೆ ತಿಳಿಸಿದರು



ಮಾನಿಷಾದ ಪ್ರತಿಷ್ಠಾಂತ್ವಮಗಮಃ ಶಾಶ್ವತೀಃ ಸಮಾಃ । ಯತ್ಕ್ರೌಂಚಮಿಥುನಾದೇಕಮವಧೀಃ ಕಾಮಮೋಹಿತಂ ॥
[illegible]

ಬಾಲಕಾಂಡ - ೨ ನೇ ಸರ್ಗ

ನಾರದರು ಹೊರಟುಹೋದ ಮೇಲೆ ವಾಲ್ಮೀಕಿಯು ತಮಸಾನದೀ ತೀರದಲ್ಲಿ ಆಹ್ನಿಕಕ್ಕಾಗಿ ಹೊರಟರು. ಸಮೀಪದಲ್ಲಿ ವಿಹರಿಸುತ್ತಿರುವ ಕ್ರೌಂಚಯುಗ್ಮದಲ್ಲಿ ಒಬ್ಬ ಬೇಡನು [illegible] ಗಂಡುಹಕ್ಕಿಯನ್ನು ಹೊಡೆದು ಕೆಡವಿದನು. ಆಗ ವಾಲ್ಮೀಕಿಯು ಗೋಳಿಡುತ್ತಿರುವ ಹೆಣ್ಣುಹಕ್ಕಿಯನ್ನು ನೋಡಿ ಶೋಕಪರವಶರಾಗಿ ಆ ಬೇಡನ ವಿಷಯದಲ್ಲಿ ಕಠೋರವಾದ ಮಾತನಾಡಿ ಹಾಗೆ ತಾವಾಡಿದ ನುಡಿಗಾಗಿ ಪಶ್ಚಾತ್ತಾಪಪಡುತ್ತಿರಲು, ಬ್ರಹ್ಮನು ಕಾಣಿಸಿಕೊಂಡು ಶ್ರೀರಾಮನ ಚರಿತ್ರವನ್ನು ಹೇಳಿ ನಾರದರಿಂದ ಉಪದಿಷ್ಟವಾದ ರಾಮಚರಿತ್ರೆಯನ್ನು ಶ್ಲೋಕರೂಪವಾಗಿ ರಚಿಸೆಂದು ಹೇಳಿ ಅಂತರ್ಧಾನನಾದನು.



ಬಾಲಕಾಂಡ-೩ ನೇ ಸರ್ಗ

ಬ್ರಹ್ಮಪ್ರಸಾದದಿಂದ ಧ್ಯಾನನಿಷ್ಠನಾಗಿ ಕುಳಿತ ವಾಲ್ಮೀಕಿಗೆ ರಾಮಚರಿತ್ರೆಯೆಲ್ಲಾ ತತ್ಕಾಲದಲ್ಲಿ ನಡೆದಂತೆಯೇ ಕಂಡಿತು.



ತಸ್ಯ ಚಿಂತಯಮಾನಸ್ಯ ಮಹರ್ಷೇರ್ಭಾವಿತಾತ್ಮನಃ । ಅಗೃಹ್ಣೀತಾಂ ತತಃ ಪಾದೌ ಮುನಿವೇಷೌ ಕುಶೀಲವೌ ॥ ೫ ॥

S.K.L


ಬಾಲಕಾಂಡ - ೪ನೇ ಸರ್ಗ

೨೪೦೦೦ ಶ್ಲೋಕ ಪೂರಿತವಾದ ರಾಮಾಯಣವನ್ನು ವಾಲ್ಮೀಕರು ರಚಿಸಿ ಸಮೀಪದಲ್ಲಿದ್ದ ಶ್ರೀರಾಮ ಪುತ್ರರಾದ ಕುಶೀಲವರಿಗೆ ಉಪದೇಶಮಾಡಿದರು.

ತತಃ ಸ್ವ ತು ರಾಮವಚಃ ಪ್ರಚೋದಿತಾವಗಾಯತಾಂ ಮಾರ್ಗವಿಧಾನ ಸಂಪದಾ । ಸ ಚಾಪಿ ರಾಮಃ ಪರಿಷದ್ಗತಃ ಶನೈರ್ಬುಭೂಷಯಾಸಕ್ತಮನಾ ಬಭೂವ ಹ

ಬಾಲಕಾಂಡ-೪ನೇ ಸರ್ಗ (೨)


ಶ್ರೀರಾಮನು ಅಶ್ವಮೇಧಯಾಗವನ್ನು ಮಾಡಿದ ಕಾಲದಲ್ಲಿ ಮಹರ್ಷಿಗಳೆಲ್ಲಾ ಕೇಳುತ್ತಿದ್ದ ಸಭೆಯಲ್ಲಿ ವಾಲ್ಮೀಕಿಯ ಗಾಯಕರಾದ ಕುಶಲವರಿಂದ ಸಂಗೀತಶಾಸ್ತ್ರಾನುಸಾರವಾಗಿ ರಾಮಾಯಣವನ್ನು ಗಾನಮಾಡಿಸಲು, ಶ್ರೀರಾಮನು ತನ್ನ ಚರಿತ್ರೆಯ ಶ್ರವಣದಲ್ಲಿ ಬಹು ಉತ್ಸಾಹಪೂರ್ಣನಾದನು.



ಅಯೋಧ್ಯಾ ನಾಮ ನಗರೀ ತತ್ರಾಸೀಲ್ಲೋಕವಿಶ್ರುತಾ। ಮನುನಾ ಮಾನವೇಂದ್ರೇಣ ಯಾ ಪುರೀ ನಿರ್ಮಿತಾ ಸ್ವಯಂ॥

ಬಾಲಕಾಂಡ - ೫ನೇ ಸರ್ಗ

ಸರಯೂನದಿಯ ತೀರದಲ್ಲಿ ಅಯೋಧ್ಯಾನಗರಿಯೆಂಬ ಪಟ್ಟಣವು ಮಹದೈಶ್ವರ್ಯ ಸಂಪನ್ನವಾದ ಪ್ರಜೆಗಳಿಂದ ಕೂಡಿ ಲೋಕವಿಖ್ಯಾತವಾಗಿತ್ತು.



ಯಥಾ ಮನುರ್ಮಹಾತೇಜಾ ಲೋಕಸ್ಯ ಪರಿರಕ್ಷಿತಾ। ತಥಾ ದಶರಥೋ ರಾಜಾ ವಸಞ್ಜಗದಪಾಲಯತ್॥

S.K.L.

ಬಾಲಕಾಂಡ - ೬ನೇ ಸರ್ಗ


ಆ ಅಯೋಧ್ಯಾಪಟ್ಟಣದಲ್ಲಿ ಇಕ್ಷ್ವಾಕುವಂಶೀಯನಾದ ದಶರಥನು ಮಹಾರಥನೆಂದು ಪ್ರಸಿದ್ಧನಾಗಿ ಬಹು ಧರ್ಮದಿಂದ ರಾಜ್ಯವನ್ನಾಳುತ್ತಿದ್ದನು.

ತೈರ್ಮಂತ್ರಿಭಿರ್ಮಂತ್ರವಿದ್ಭಿರ್ವೃತೋನುರಕ್ತೈಃ ಕುಶಲೈಸ್ಸಮರ್ಥೈಃ। ಸಪಾರ್ಥಿವೋ ದೀಪ್ತಿಮವಾಪಯುಕ್ತಸ್ತೇಜೋಮಯೈರ್ಗೋಭಿರಿವೋದಿತೋರ್ಕಃ

S K L

ಬಾಲಕಾಂಡ - ೭ನೇ ಸರ್ಗ

ಆ ದಶರಥರಾಜನು ಬಹು ಸಮರ್ಥರಾದ ಮಂತ್ರಿಶ್ರೇಷ್ಠರಿಂದಲೂ ಋಷಿಶ್ರೇಷ್ಠರುಗಳಿಂದಲೂ ಕೂಡಿಕೊಂಡು ಬಹು ಧರ್ಮದಿಂದ ರಾಜ್ಯವನ್ನು ಪರಿಪಾಲಿಸುತ್ತಿದ್ದನು




[illegible]

S.K.L.

ಬಾಲಕಾಂಡ - ೮ ನೇ ಸರ್ಗ.


ದಶರಥರಾಯನು ತನಗೆ ಮಕ್ಕಳಿಲ್ಲವೆಂದು ಚಿಂತಿಸುತ್ತಾ ಅಶ್ವಮೇಧಯಾಗವನ್ನು ಮಾಡಬೇಕೆಂದು ಯೋಚಿಸಿ ತನ್ನ ಮಂತ್ರಿಗಳಿಗೂ ಪುರೋಹಿತ ಮುಂತಾದವರಿಗೂ ತಿಳಿಸಿ ಯಜ್ಞಕ್ಕಾಗಿ ಸಾಮಗ್ರಿಗಳನ್ನು ಸಿದ್ಧಪಡಿಸಬೇಕೆಂದು ಮಂತ್ರಿಗಳಿಗೆ ಆಜ್ಞಾಪಿಸಿದನು.



ಏವಮಂಗಾಧಿಪೇನೈವ ಗಣಿಕಾಭಿರೃಷೇಸ್ಸುತಃ । ಆನೀತೋಽವರ್ಷಯದ್ದೇವಃ ಶಾಂತಾ ಚಾಸ್ಮೈ ಪ್ರದೀಯತೇ ॥

ಬಾಲಕಾಂಡ - ೯ ನೇ ಸರ್ಗ

ಅಂಗದೇಶದ ರಾಜನಾದ ರೋಮಪಾದರಾಯನು ತನ್ನ ಕೇರದಲ್ಲಿ ಕ್ಷಾಮ ಪ್ರಾಪ್ತಿಯಾಗಲು, ವಿಭಾಂಡಕ ಪುತ್ರನಾದ ಋಷ್ಯಶೃಂಗನನ್ನು ಕರೆಸಿ ಪುತ್ರಿಯಾದ ಶಾಂತಾದೇವಿಯನ್ನು ವಿವಾಹ ಮಾಡಿಕೊಟ್ಟರೆ ಸುವೃಷ್ಟಿಯಾಗುವುದೆಂದು ವೇದವಿಸ್ಥರಾದ ಬ್ರಾಹ್ಮಣರು ತಿಳುಹಿಸಲು; ಆತನನ್ನು ಕರೆತರುವುದಕ್ಕಾಗಿ ವೇಶ್ಯಾಸ್ತ್ರೀಯರನ್ನು ಕಳುಹಿಸಿ ಕೊಟ್ಟನು ಎಂದು ಸುಮಂತ್ರನು ದಶರಥನಿಗೆ ಹೇಳಿದನು.



ಬಾಲಕಾಂಡ- ೧೦ನೇ ಸರ್ಗ (೧)

ರೋಮಪಾದ ರಾಜನಿಂದ ಆಜ್ಞಾಪಿತರಾದ ವೇಶ್ಯಾಸ್ತ್ರೀಯರು ವಿಧವಿಧಗಳಾದ ಭಕ್ಷ್ಯಗಳೊಡನೆ ವಿಭಾಂಡಕರ ಆಶ್ರಮಕ್ಕೆ ಹೋಗಿ ದೂರದಲ್ಲಿ ಋಷ್ಯಶೃಂಗರನ್ನು ಕಂಡು ಅವನನ್ನು ವಶಮಾಡಿಕೊಳ್ಳಲು ಪ್ರಯತ್ನಪಟ್ಟರು.



S.K.L.

ಬಾಲಕಾಂಡ-೧೦ನೇ ಸರ್ಗ

ರೂಪವತಿಯರಾದ ಆ ವೇಶ್ಯಾಂಗನೆಯರು ಋಷ್ಯಶೃಂಗನಿಗೆ ಮೋಹವನ್ನುಂಟುಮಾಡಿ ಅವನ ಆಶ್ರಮದಿಂದ ಕರೆದುಕೊಂಡು ಬಂದರು.



ಅಂತಃಪುರಂ ಪ್ರವಿಶ್ಯಾಸ್ಮೈ ಕನ್ಯಾಂ ದತ್ವಾ ಯಥಾವಿಧಿ । ಶಾಂತಾಂ ಶಾಂತೇನ [illegible] ರಾಜಾ ಹರ್ಷ[illegible] ॥

SKI

ಬಾಲಕಾಂಡ - ೧೦ನೇ ಸರ್ಗ (೨)

ವೇಶ್ಯಾಸ್ತ್ರೀಯರಿಂದ ಕರೆತರಲ್ಪಟ್ಟ ಋಷ್ಯಶೃಂಗನಿಗೆ [illegible]ಪಾದರಾಯನು ತನ್ನ ಮಗಳಾದ ಶಾಂತಾದೇವಿಯನ್ನು ವಿವಾಹ ಮಾಡಿಕೊಟ್ಟನು ಎಂದು ಸುಮಂತ್ರನು [illegible]ರಥರಾಯನಿಗೆ ಹೇಳಿದನು.



S.K.L.


ಬಾಲಕಾಂಡ - ೧೧ನೇ ಸರ್ಗ(೧)

ಸುಮಂತ್ರನ ಮಾತನು ಕೇಳಿ ದಶರಥನು ಅಂಗದೇಶಕ್ಕೆ ಹೋಗಿ ರೋಮಪಾದನೊಡನೆ ಸಖ್ಯವಂ ಬೆಳಸಿ ಋಷ್ಯಶೃಂಗನ ಶಾಂತಾದೇವಿಯರನ್ನು ಅಯೋಧ್ಯಾಪಟ್ಟಣಕ್ಕೆ ಕಳುಹಿಸಿ ಕೊಡಬೇಕೆಂದು ಕೇಳಲು, ಆ ರೀತಿಯಲ್ಲಿ ಹೋಗಿ ಬರಲು ಅವರಿಗೆ ರೋಮಪಾದನು ಅಪ್ಪಣೆ ಕೊಟ್ಟನು

ತತಸ್ಸ್ವಲಂಕೃತಂ ರಾಜಾ ನಗರಂ ಪ್ರವಿವೇಶ ಹ । ಶಂಖದುಂದುಭಿನಿರ್ಘೋಷೈಃ ಪುರಸ್ಕೃತ್ಯ ದ್ವಿಜರ್ಷಭಮ್ ॥

ಬಾಲಕಾಂಡ - ೧೧ನೇ ಸರ್ಗ (೮)(೨) S.K.L.

ರೋಮಪಾದನಿಂದ ಕಳುಹಿಸಲ್ಪಟ್ಟ ಋಷ್ಯಶೃಂಗ ಶಾಂತಾದೇವಿಯರನು ದಶರಥನು ಉತ್ಸವ ಸಹಿತ ಅಯೋಧ್ಯಾಪಟ್ಟಣಕ್ಕೆ ಪ್ರವೇಶಮಾಡಿಸಿ ತನ್ನ ಅರಮನೆಗೆ ಕರೆದುಕೊಂಡು ಹೋದನು.



ತ. ಶ್ಲೋ. ಪ್ರಸಾದ್ಯ ಶಿರಸಾ ತಾಂಸ್ತು ವಿಪ್ರಾಂದೇವಸಮಾನ್ಗಣಾನ್। ಯಜ್ಞಾಪವರ್ಗೇ ಸಂತಾನಾರ್ಥಂ ಹೇಮಸ್ರಜಃ॥ ಶ್ರೀ ॥

ಬಾಲಕಾಂಡ - ೧೪ ನೇ ಸರ್ಗ

ಸಂತಾನವು ಅವಿಚ್ಛೇದವಾಗಿ ನಡೆಯುವದಕ್ಕೋಸ್ಕರ ಯಜ್ಞಾರ್ಥವಾಗಿ ದಶರಥರಾಯನು ಋಷ್ಯಶೃಂಗರಿಗೆ ದಕ್ಷಿಣೆಯನ್ನು ಕೊಟ್ಟನು.



ಬಾಲಕಾಂಡ - ೧೩ನೇ ಸರ್ಗ.

ದಶರಥನ ಯಾಗಕ್ಕಾಗಿ ಅವಶ್ಯಕವಾಗಿರುವ ಸಮಸ್ತ ಕೆಲಸದವರಿಗೂ ವಸಿಷ್ಠರು ಆಜ್ಞೆ ಕೊಟ್ಟು ಮಂತ್ರಿಯಾದ ಸುಮಂತ್ರನಿಗೆ ಸಮಸ್ತ ರಾಜರುಗಳನ್ನೂ ಸ್ವಯಮೇವ ಕರೆದುಕೊಂಡು ಬರುವಂತೆ ಹೇಳಿದರು.

[illegible]

[illegible]



ಬಾಲಕಾಂಡ - ೧೫ನೇ ಸರ್ಗ

[illegible] ಪುತ್ರಕಾಮೇಷ್ಟಿಯನ್ನು [illegible] ದೇವತೆಗ[illegible] [illegible] ಬ್ರಹ್ಮನ [illegible] ಬಾಧೆಯನ್ನು [illegible] [illegible] [illegible] [illegible] ಅಭಯ [illegible].

ಸಮವೇಕ್ಷ್ಯಾಬ್ರವೀದ್ವಾಕ್ಯಮಿದಂ ದಶರಥಂ ನೃಪಂ। ಪ್ರಾಜಾಪತ್ಯಂ ನರಂ ವಿದ್ಧಿ ಮಾಮಿಹಾಭ್ಯಾಗತಂ ನೃಪ

ಬಾಲಕಾಂಡ - ೧೬ನೇ ಸರ್ಗ

ಪುತ್ರಕಾಮೇಷ್ಟಿಯಾಗವು ನಡೆಯುತ್ತಿರಲು, ಆಹವನೀಯಾಗ್ನಿಯಿಂದ ಪ್ರಾಜಾಪತ್ಯನೆಂಬ ಪುರುಷನು ಪಾಯಸವಿರುವ ಸುಂದರ ಚಿನ್ನದ ಪಾತ್ರೆಯನ್ನು ಹಿಡಿದು ಕೊಂಡು ಆವಿರ್ಭಾವಿಸಿ ಈ ದೇವನಿರ್ಮಿತವಾದ ಪಾಯಸವನ್ನು ದಶರಥನಿಗೆ ಕೊಟ್ಟು ಆತನನ್ನು ಕುರಿತು ಇದನ್ನು ನಿನ್ನ ಪತ್ನಿಯರಿಗೆ ಕೊಟ್ಟರೆ ಪುತ್ರರುಂಟಾಗುವರು ಎಂದು ಹೇಳಿ ಅಂತರ್ಧಾನನಾದನು.



ಏವಂ ತಾಸಾಂ ದದೌ ರಾಜಾ ಭಾರ್ಯಾಣಾಂ ಪಾಯಸಂ ಪೃಥಕ್

ಬಾಲಕಾಂಡ ೧೬ನೇ ಸರ್ಗ (೨)

ಅನುಗ್ರಹಿಸಲ್ಪಟ್ಟ ಪಾಯಸವನ್ನು ದಶರಥನು ತನ್ನ ೩ ಜನ ರಾಣಿಯರಿಗೂ ಹಂಚಿದನು.



[illegible]

S K. L

ಬಾಲಕಾಂಡ-೧೭ನೇ ಸರ್ಗ

ಶ್ರೀಮನ್ನಾರಾಯಣಮೂರ್ತಿಯು ದಶರಥ ರಾಯನಿಗೆ ಪುತ್ರಭಾವವನ್ನು ಹೊಂದಲು, ಬ್ರಹ್ಮನ ಅನುಜ್ಞೆಯಂತೆ ದೇವತೆಗಳೆಲ್ಲಾ ತಮ್ಮ ತಮ್ಮ ಅಂಶಗಳೊಡನೆ ಭೂಲೋಕದಲ್ಲಿ ವಾನರರಾಗಿ ಜನಿಸಿದರು.



ಪ್ರೋದ್ಯಮಾನೇ ಜಗನ್ನಾಥಂ ಸರ್ವಲೋಕ ನಮಸ್ಕೃತಂ। ಕೌಸಲ್ಯಾಜನಯದ್ರಾಮ ಸರ್ವಲಕ್ಷಣ ಸಂಯುತಂ।

S.K.L.

ಬಾಲಕಾಂಡ - ೧೮ನೇ ಸರ್ಗ (೧)

ಪುತ್ರಕಾಮೇಷ್ಟಿಯಾಗ ಪ್ರಸಾದದಿಂದ ದಶರಥನ ರಾಣಿಯರಾದ ಕೌಸಲ್ಯಾ, ಕೈಕೆಯಿ ಮತ್ತು ಸುಮಿತ್ರೆಯರು ಗರ್ಭವತಿಯರಾಗಿ ನವಮಾಸಾನಂತರ ಕೌಸಲ್ಯೆಯಲ್ಲಿ ಶ್ರೀರಾಮನೂ, ಕೈಕೆಯಿಯಲ್ಲಿ ಭರತನೂ ಸುಮಿತ್ರೆಯಲ್ಲಿ ಲಕ್ಷ್ಮಣ ಶತ್ರುಘ್ನರೂ ಮಹಾವಿಷ್ಣುವಿನ ಅಂಶ ಸಂಭೂತರಾಗಿ ಜನಿಸಿದರು.

ಬಾಲಕಾಂಡ - ೧೮ ನೇ ಸರ್ಗ (೨)

ಪಟ್ಟಮಹಿಷಿಯಾದ ಕೌಸಲ್ಯೆ, ಕೈಕೇಯಿ ಮತ್ತು ಸುಮಿತ್ರಾ ದೇವಿಯರಲ್ಲಿ ಜನಿಸಿದ ಶ್ರೀರಾಮ, ಭರತ ಮತ್ತು ಲಕ್ಷ್ಮಣ ಶತ್ರುಘ್ನರೆಂಬ ಮಕ್ಕಳ ಲೀಲೆಗಳನ್ನು ನೋಡಿ ದಶರಥನು ರಾಣಿಯರೊಡನೆ ಆನಂದಪಡುತ್ತಿದ್ದನು.



[illegible]

ಬಾಲಕಾಂಡ ೧೮ನೇ ಸರ್ಗ

[illegible]



ಸ್ವಪುತ್ರಂ ರಾಜಶಾರ್ದೂಲ ರಾಮಂ ಸತ್ಯಪರಾಕ್ರಮಂ। ಕಾಕಪಕ್ಷಧರಂ ಶೂರಂ ಜ್ಯೇಷ್ಠಂ ಮೇ ದಾತುಮರ್ಹಸಿ॥

S. K. L.

ಬಾಲಕಾಂಡ - ೧೯ ನೇ ಸರ್ಗ

ಬಂದ ಕಾರ್ಯವನ್ನು ನೆರವೇರಿಸಲು ಸಿದ್ಧನಾಗಿದ್ದೇನೆಂದು ಹೇಳಿದ ದಶರಥನ ಮಾತನ್ನು ಕೇಳಿ ಸಂತೋಷಪಟ್ಟು ವಿಶ್ವಾಮಿತ್ರನು ತಾನು ಸಿದ್ಧಿಗೋಸ್ಕರ ನಡೆಸುತ್ತಿರುವ ಯಜ್ಞಕ್ಕೆ ವಿಶ್ವಾಮಿತ್ರನು ವಿಘ್ನ ಮಾಡುತ್ತಿರುವ ಸುಬಾಹು ಮಾರೀಚರೆಂಬ ರಾಕ್ಷಸರನ್ನು ಸಂಹಾರಮಾಡುವುದಕ್ಕಾಗಿ ಸತ್ಯಪರಾಕ್ರಮಿಯಾದ ಶ್ರೀರಾಮನನ್ನು ಕಳುಹಿಸಿಕೊಡಬೇಕೆಂದು ಕೇಳಿದನು.



ಬಾಲಕಾಂಡ - ೨೦ನೇ ಸರ್ಗ

ಶ್ರೀರಾಮನನ್ನು ಕಳುಹಿಸಿಕೊಡಬೇಕೆಂದು ಕೇಳಿದ ವಿಶ್ವಾಮಿತ್ರನನ್ನು ಕುರಿತು ದಶರಥ ರಾಯನು ಬಹು ದುಃಖಿತನಾಗಿ ಬಾಲಕನಾದ ರಾಮನನ್ನು ಕಳುಹಿಸಲಾರೆನೆಂದು ಅನೇಕವಾಗಿ ಬಹುವಿಧವಾಗಿ ಹೇಳಿಕೊಂಡನು. ಇದಕ್ಕೆ ವಿಶ್ವಾಮಿತ್ರನು ಬಹುಕೋಪಗೊಂಡು ಬಂದದಾರಿಯಲ್ಲಿಯೇ ಹೋಗುತ್ತೇನೆಂದು ದಶರಥನನ್ನು ಧಿಕ್ಕರಿಸಿದನು



S.K.L

ಬಾಲಕಾಂಡ - ೨೧ ನೇ ಸರ್ಗ.

ಕಡು ಕೋಪಿಷ್ಠನಾದ [illegible] ನನ್ನು ನೋಡಿ ವಸಿಷ್ಠ ಮುನಿಯು ದಶರಥನನ್ನು ಕುರಿತು ವಿಶ್ವಾಮಿತ್ರನ [illegible] ಬಾಲಕರ್ [illegible] ಅಭ್ಯುದಯವುಂಟು ಎಂದು [illegible] ತಪ್ಪುದು [illegible] ಸಮಾಧಾನ ಮಾಡುವುದು.



ಬಾಲಕಾಂಡ - ೨೨ ನೇ ಸರ್ಗ.

ವಸಿಷ್ಠರು ಸಮಾಧಾನ ಮಾಡಿದಮೇಲೆ ದಶರಥನು ಲಕ್ಷ್ಮಣಸಹಿತನಾದ ಶ್ರೀರಾಮನನ್ನು ಕರೆದು ವಿಶ್ವಾಮಿತ್ರನಿಗೆ ಒಪ್ಪಿಸಿದನು



ಬಾಲಕಾಂಡ - ೨೨ ನೇ ಸರ್ಗ. (೨)

ವಿಶ್ವಾಮಿತ್ರನು ಶ್ರೀರಾಮಲಕ್ಷ್ಮಣರೊಡನೆ ಪ್ರಯಾಣ ಮಾಡಿ ಸರಯೂನದಿಯ ತೀರದಲ್ಲಿ ನಿಂತು ಬಲಾ, ಅತಿಬಲ ಎಂಬ ಮಂತ್ರಗಳನ್ನು ಶ್ರೀರಾಮನಿಗೆ ಉಪದೇಶ ಕೊಟ್ಟನು.



ಪ್ರಸಂಗ ೨೩. ವಿಶ್ವಾಮಿತ್ರನು ರಾಮಲಕ್ಷ್ಮಣರಿಗೆ ಅನಂಗನ [illegible]

S.K.L.

ಬಾಲಕಾಂಡ - ೨೩ನೇ ಸರ್ಗ

ಮಾರನೆಯ ಪ್ರಾತಃಕಾಲದಲ್ಲಿ ರಾಮಲಕ್ಷ್ಮಣರೊಡನೆ ವಿಶ್ವಾಮಿತ್ರನು ಮುಂದೆ ಪ್ರಯಾಣಮಾಡುತ್ತಿರಲು, ಆ ದೇಶದ ವೃತ್ತಾಂತವನ್ನು ಹೇಳಬೇಕೆಂದು ಕೇಳಿದರು. ಪೂರ್ವದಲ್ಲಿ ಈ ಸ್ಥಳದಲ್ಲಿ ಮಹೇಶ್ವರನು ತಪಸ್ಸು ಮಾಡುತ್ತಿದ್ದನು. ಆತನ ಮನಸ್ಸಿಗೆ ವಿಘ್ನಮಾಡಬೇಕೆಂದು ಮನ್ಮಥನು ಪ್ರಯತ್ನಪಟ್ಟನು. ಈಶ್ವರನು ತನ್ನ ಫಾಲನೇತ್ರವನ್ನು ತೆರೆದು ಆ ಮನ್ಮಥನನ್ನು ದಹಿಸಿಬಿಟ್ಟನು. ಅಂದಿನಿಂದ ಶರೀರರಹಿತನಾಗಿ ಅವನು ಅನಂಗನೆಂದು ಪ್ರಖ್ಯಾತನಾದನು. ಈ ದೇಶವು ಅಂಗದೇಶವೆಂದು ಪ್ರಸಿದ್ಧಿಯಾಯಿತೆಂದು ವಿಶ್ವಾಮಿತ್ರನು ತಿಳುಹಿಸಿದನು.



[illegible]

ಬಾಲಕಾಂಡ - ೨೪ ನೇ ಸರ್ಗ.

ಪ್ರಾತಃಕಾಲವಾಗುತ್ತಲೇ ತಾಪಸರೆಲ್ಲರೂ ಸಿದ್ಧಮಾಡಿದ ಹಡಗನ್ನೇರಿ ವಿಶ್ವಾಮಿತ್ರನು ರಾಮಲಕ್ಷ್ಮಣರೊಡನೆ ಗಂಗಾನದಿಯನ್ನು ದಾಟುತ್ತಿರಲು ಗಂಗೋದಕಮಧ್ಯದಲ್ಲಿ ಉಂಟಾಗುತ್ತಿರುವ ಶಬ್ದದ ಕಾರಣವನ್ನು ಶ್ರೀರಾಮನು ಕೇಳಲು, ವಿಶ್ವಾಮಿತ್ರರು ಸರಯೂನದಿಯ ಉತ್ಪತ್ತಿಯ ವಿಷಯವನ್ನು ತಿಳುಹಿಸಿ ಆ ನದಿಯ ಸಂಘಟ್ಟನೆಯಿಂದ ಉಂಟಾದ ಶಬ್ದವೆಂದು ಹೇಳಿದರು.



ಏತಾಂ ರಾಘವ ದುರ್ವೃತ್ತಾಂ ಯಕ್ಷೀಂ ಪರಮದಾರುಣಾಂ । ಗೋಬ್ರಾಹ್ಮಣಹಿತಾರ್ಥಾಯ ಜಹಿ ದುಷ್ಟಪರಾಕ್ರಮಾಂ ॥ ೨೫ ॥ ೨೬

S.K.L.

ಬಾಲಕಾಂಡ ೨೫ನೇ ಸರ್ಗ

ತಾಟಕಾವನವನ್ನು ತೋರಿಸಿ ಆ ತಾಟಕಿಯ ಪೂರ್ವವೃತ್ತಾಂತವನ್ನೆಲ್ಲಾ ತಿಳುಹಿಸಿ ಅಧರ್ಮಿಷ್ಠಳಾದ ಅಂತಹವಳನ್ನು ಸಂಹರಿಸಿದರೆ ಸ್ತ್ರೀಹತ್ಯಾ ದೋಷವಿರುವದಿಲ್ಲವೆಂದು ಸಮಾಧಾನ ಮಾಡಿ ಅವಳನ್ನು ಸಂಹರಿಸಬಹುದೆಂದು ವಿಶ್ವಾಮಿತ್ರರು ಶ್ರೀರಾಮನಿಗೆ ಹೇಳಿದನು.



ಬಾಲಕಾಂಡ ೨೬ ವೇ ಸರ್ಗ

ವಿಶ್ವಾಮಿತ್ರರ ಮಾತನ್ನು ಕೇಳಿ ಶ್ರೀರಾಮನು ತಾಟಕಾ ವನದಲ್ಲಿ ಧನುಷ್ಟಂಕಾರ ಮಾಡಲು, ತಾಟಕಿಯು ರಾಮಲಕ್ಷ್ಮಣರ ಮೇಲೆ ಬೀಳುವುದಕ್ಕೆ ಬಂದಳು. ಕೂಡಲೇ ಶ್ರೀರಾಮನು, ಆ ಘೋರರೂಪಿಣಿಯಾದ ತಾಟಕಿಯನ್ನು ಸಂಹಾರ ಮಾಡಿದನು.



ಬಾಲಕಾಂಡ ಪು. ೫೬ ನೋಡಿರಿ

ವಿಶ್ವಾಮಿತ್ರರು ಶ್ರೀರಾಮನಿಗೆ ಸಮಸ್ತ ಅಸ್ತ್ರಗಳನ್ನು ಉಪದೇಶಿಸುವದು.

ಗೃಹೀತಾಸ್ತ್ರೋಽಸ್ಮಿ ಭಗವನ್ ದುರಾಧರ್ಷಃ ಸುರೈರಪಿ । ಅಸ್ತ್ರಾಣಾಂ ತ್ವಹಮಿಚ್ಛಾಮಿ ಸಂಹಾರಂ ಮುನಿಪುಂಗವ ॥

S. K. L.

ಬಾಲಕಾಂಡ ೨೮ನೇ ಸರ್ಗ.

ವಿಶ್ವಾಮಿತ್ರರಿಂದ ಉಪದೇಶಿಸಲ್ಪಟ್ಟ ಅಸ್ತ್ರಗಳನ್ನೆಲ್ಲಾ ಗ್ರಹಿಸಿದ ಶ್ರೀರಾಮನು ಆ ಅಸ್ತ್ರಗಳ ಉಪಸಂಹಾರವನ್ನು ಕೇಳಿಕೊಳ್ಳಲು, ಅವುಗಳನ್ನೆಲ್ಲಾ ವಿಶ್ವಾಮಿತ್ರರು ಉಪದೇಶ ಮಾಡಿದರು. ಅಲ್ಲಿಂದ ಹೊರಟು ಸ್ವಲ್ಪ ದೂರ ದಾಟಿ ಒಂದು ಆಶ್ರಮದ ಸಮೀಪಕ್ಕೆ ಹೋಗುತ್ತಾ ಆ ಆಶ್ರಮದ ವೃತ್ತಾಂತವನ್ನು ತಿಳಿಯಲು ಶ್ರೀರಾಮನು ಅಪೇಕ್ಷಿಸಿದನು.

[illegible]

S. K. L.

ಬಾಲಕಾಂಡ ೨೯ನೇ ಸರ್ಗ

ಸಿದ್ಧಾಶ್ರಮವೆಂಬ ಆಶ್ರಮದ ವೃತ್ತಾಂತವನ್ನು ಶ್ರೀರಾಮನು ಕೇಳಲು, ಪೂರ್ವದಲ್ಲಿ ಬಲಿಚಕ್ರವರ್ತಿಯು ಇಂದ್ರನನ್ನು ಜಯಿಸಿ ತ್ರೈಲೋಕ್ಯಾಧಿಪತ್ಯವನ್ನು ಪಡೆಯಲು, ದೇವತೆಗಳ ಸಹಾಯಕ್ಕಾಗಿ ಮಹಾವಿಷ್ಣುವು ವಾಮನಾವತಾರವನ್ನು ಮಾಡಿ ಬಲಿಯಿಂದ ೩ ಹೆಜ್ಜೆ ಭೂಮಿಯನ್ನು ಬೇಡಿ ತ್ರಿಲೋಕಗಳನ್ನೂ ಆಕ್ರಮಿಸಿ ಪುನಃ ದೇವೇಂದ್ರನಿಗೆ ಕೊಟ್ಟನು. ಆ ವಾಮನ ಮೂರ್ತಿಯಿಂದ ಆಶ್ರಯಿಸಲ್ಪಟ್ಟಿದ್ದ ಈ ಆಶ್ರಮವು ಸಿದ್ಧಾಶ್ರಮವೆಂದು ಪ್ರಸಿದ್ಧವಾಯಿತೆಂದು ವಿಶ್ವಾಮಿತ್ರರು ಹೇಳಿದರು.



[illegible]

ಬಾಲಕಾಂಡ ೩೦ನೇ ಸರ್ಗ.

ವಿಶ್ವಾಮಿತ್ರರು ದೀಕ್ಷಾಬದ್ಧರಾಗಿ ಕುಳಿತಿರಲಾಗಿ ... ಸುಬಾಹು ಮಾರೀಚರೆಂಬ ... ಕ್ಷಸರು ಆ ಯಜ್ಞವನ್ನು ಕೆಡಿಸುವುದಕ್ಕಾಗಿ ಮೇಲೆ ಆಕಾಶದಿಂದ ಬಂದರು. ಆಗ ಶ್ರೀರಾಮನು ಮಂ...ನ ಮೇಲೆ ಮಾನವಾಸ್ತ್ರವನ್ನು ಪ್ರಯೋಗಿಸಿ ಶತಯೋಜನ ದೂರದಲ್ಲಿರುವ ಸಮುದ್ರದಲ್ಲಿ ... ಬೀಳುವಂತೆ ಮಾಡಿ ಆಗ್ನೇಯಾಸ್ತ್ರದಿಂದ ಸುಬಾಹುವನ್ನು ವಾಯವ್ಯಾಸ್ತ್ರದಿಂದ ಇತರ ಸಮಸ್ತ ... ಕ್ಷಸರನ್ನು ಸಂಹರಿಸಿದನು. ಯಜ್ಞವು ನಿರುಪಾಧಿಕವಾಗಿ ಪೂರೈಸುವಂತೆ ಮಾಡಿದನು



[illegible]

ಬಾಲಕಾಂಡ ೩೧ನೇ ಸರ್ಗ

[illegible]



[illegible]

ಬಾಲಕಾಂಡ ೩೨ ನೇ ಸರ್ಗ.

ಬ್ರಹ್ಮಪುತ್ರನಾದ ಕುಶನೆಂಬ ರಾಜನಿಗೆ ಮಗನಾದ ಕುಶನಾಭನಿಗೆ ಬಹು ಸುಂದರಿಯರಾದ ೧೦೦ ಮಂದಿ ಕನ್ಯಕೆಯರಿದ್ದರು. ಅವರು ಉದ್ಯಾನವನದಲ್ಲಿ ಸಂಚರಿಸುತ್ತಿದ್ದಾಗ ವಾಯುವು ಮನುಷ್ಯರೂಪವನ್ನು ಧರಿಸಿ ನನಗೆ ಸತಿಯರಾಗಿ ಎಂದು ಅವರನ್ನು ಕೇಳಿಕೊಂಡನು. ಆ ಕನ್ಯೆಯರು ತಮ್ಮ ತಂದೆಯ ಅನುಮತಿ ಇಲ್ಲದೆ ಒಪ್ಪುವುದಾಗುವುದಿಲ್ಲವೆಂದು ಆ ವಾಯುವಿಗೆ ತಿಳಿಸಲು, ಅವನು ಕೋಪದಿಂದ ಅವರ ಅಂಗಗಳನ್ನೆಲ್ಲಾ ಕೆಡಿಸಿದನು. ಅವರು ದುಃಖಿತರಾಗಿ ತಮ್ಮ ತಂದೆಗೆ ತಿಳಿಸಿದರು.

ಸ ಬುದ್ಧಿಂ ಕೃತವಾನ್ ರಾಜಾ ಕುಶನಾಭಃ ಸುಧಾರ್ಮಿಕಃ । ಬ್ರಹ್ಮದತ್ತಾಯ ಕಾಕುತ್ಸ್ಥ ದಾತುಂ ಕನ್ಯಾಶತಂ ತದಾ ॥

S.K.L

ಬಾಲಕಾಂಡ ೩೩ನೇ ಸರ್ಗ

ಕುಶನಾಭನು ವಾಯುವಿನಿಂದ ವಿಹತರಾದ ತನ್ನ ೧೦೦ ಮಂದಿ ಕುಮಾರಿಯರ ಸದ್ಗುಣಕ್ಕೆ ಬಹು ಸಂತೋಷಪಟ್ಟು ಆ ೧೦೦ ಮಂದಿ ಕನ್ಯೆಯರನ್ನೂ ಚೂಳಿಮುನಿಯಿಂದ ಸೋಮದೆ ಎಂಬ ಗಂಧರ್ವಾಂಗನೆಗೆ ಅನುಗ್ರಹಿಸಲ್ಪಟ್ಟ ಕಂಪಿಲಾಪಟ್ಟಣಕ್ಕೆ ಅರಸನಾದ ಬ್ರಹ್ಮದತ್ತನೆಂಬ ಕುಮಾರಗೆ ವಿವಾಹ ಮಾಡಿ ಕೊಟ್ಟನು.

ಏಷಾ ರಾಮ ಮಮೋತ್ಪತ್ತಿಃ ಸ್ವಸ್ಯ ವಂಶಸ್ಯ ಕೀರ್ತಿತಾ ದೇಶಸ್ಯ ಚ ಮಹಾಬಾಹೋ ಯನ್ಮಾಂ ತ್ವಂ ಪರಿಪೃಚ್ಛಸಿ ॥ ಶ್ರೀ ೫

S.K.L

ಬಾಲಕಾಂಡ ೩೪ನೇ ಸರ್ಗ

ಈ ಕುಶನಾಭನಿಗೆ ಪತ್ನಿ ಹಂಬಿಯಿಂದ ಗಾಧಿರಾಜನೆಂಬ ಪುತ್ರನುಂಟಾದನು. ಈತನ ಮಗಳಾಗಿಯೂ ನನ್ನ ಅಕ್ಕನಾಗಿಯೂ ಜನಿಸಿದ ಸತ್ಯವತಿ ಎಂಬುವಳು ಋಚೀಕನೆಂಬ ಬ್ರಾಹ್ಮಣನಿಗೆ ಸತಿಯಾಗಿ ಸಶರೀರಳಾಗಿ ಸ್ವರ್ಗಲೋಕವನ್ನು ಹೊಂದಿ ಕೌಶಿಕಿ ಎಂಬ ನದಿಯಾಗಿ ಪ್ರವಹಿಸುತ್ತಿದ್ದಾಳೆ ಎಂದು ತನ್ನ ವಂಶವಿಸ್ತಾರವನ್ನೆಲ್ಲಾ ವಿಶ್ವಾಮಿತ್ರರು ಶ್ರೀರಾಮನಿಗೆ ತಿಳುಹಿಸಿದರು, ರಾತ್ರಿಯಾಯಿತು.



ಇತ್ತೀಚೆ ಶ್ರೀರಾಮಲಕ್ಷ್ಮಣರು ... ಗಂಗಾವತರಣ ... ಉಮಾದೇವಿ ... ॥ ॥೩೫॥ ॥೩೬॥


ಬಾಲಕಾಂಡ ೩೫ ನೇ ಸರ್ಗ

ರಾಮಲಕ್ಷ್ಮಣರೊಡನೆ ವಿಶ್ವಾಮಿತ್ರ ಮುಂದಿನ ಪಯಣದಲ್ಲಿ ಗಂಗಾತೀರವನ್ನು ಸೇರಿ ನೆಲೆಗೊಂಡರು. ಗಂಗಾನದಿಯು ಲೋಕತ್ರಯವನ್ನು ವ್ಯಾಪಿಸಿ ಹರಿಯುತ್ತದೆ ಎಂದು ಶ್ರೀರಾಮನು ಕೇಳಲು, ವಿಶ್ವಾಮಿತ್ರರು ಹೇಳುತ್ತಾರೆ – ಪರ್ವತಶ್ರೇಷ್ಠನಾದ ಹಿಮವಂತನಿಗೆ ಗಂಗೆ, ಉಮಾ ಎಂಬ ಇಬ್ಬರು ಕನ್ಯೆಯರು ಹುಟ್ಟಿದರು. ಲೋಕಪಾವನಿಯಾದ ಗಂಗೆಯನ್ನು ಹಿಮವಂತನು ದೇವತೆಗಳಿಗೆ ಕೊಟ್ಟನು. ಸ್ವರ್ಗದಲ್ಲಿ ಸುರಗಂಗೆ ಎಂದು ಪ್ರಸಿದ್ಧಿಯಾದಳು. ಉಮಾದೇವಿಯು ತಪಸ್ಸನ್ನು ಮಾಡಿ ಸಾಕ್ಷಾತ್ ಶಂಕರನಿಗೆ ಪತ್ನಿಯಾದಳು.



ಬಾಲಕಾಂಡ ಷಷ್ಠನೇ ಸರ್ಗ

ವಿವಾಹಿತನಾದ ಶಂಕರನು ಉಮಾದೇವಿಯಲ್ಲಿ ಬಹುಕಾಲ ರಮಿಸುತ್ತಿರಲು, ಆ ಭೂತವು ಜನಿಸುವುದೋ ಎಂದು ದೇವತೆಗಳೆಲ್ಲಾ ಹೆದರಿ, ತೇಜಸ್ಸನ್ನು ಬಿಡದಂತೆ ಬೇಡಿಕೊಂಡರು. ಶಂಕರನು ಹಾಗೇ ಆಗಲೆಂದು ಅವರಿಗೆಲ್ಲಾ ಅಭಯಕೊಟ್ಟು ಸ್ಖಲಿತವಾದ ತೇಜಸ್ಸನ್ನು ಭೂಮಿಯಲ್ಲಿ ಬಿಟ್ಟು ತಪಸ್ಸಿಗೆ ಹೊರಟು ಹೋದನು. ಪುತ್ರಾಕಾಂಕ್ಷೆಯಿಂದ ರಮಿಸುತ್ತಿದ್ದ ಉಮಾದೇವಿಯು ಬಹು ಕೋಪಗೊಂಡು ಅವರವರ ಪತ್ನಿಯರಲ್ಲಿ ಮಕ್ಕಳಾಗಕೂಡದೆಂದು ದೇವತೆಗಳಿಗೂ, ಬಹುಮಂದಿ [illegible] ಭೂಮಿಗೂ ಶಪಿಸಿದಳು.



ತಂ ಕುಮಾರಂ ತತೋಜಾತಂ ಸೇಂದ್ರಾಸ್ಸಹಮರುದ್ಗಣಾಃ ಕ್ಷೀರಸಂಭಾವನಾರ್ಥಾಯ ಕೃತ್ತಿಕಾಸ್ಸಮಯೋಜಯನ್

ಬಾಲಕಾಂಡ ೩೭ ನೇ ಸರ್ಗ.

ಪರಮೇಶ್ವರನು ಭೂಮಿಯಲ್ಲಿ ತನ್ನ ತೇಜಸ್ಸನ್ನು ಬಿಟ್ಟು ತಪಸ್ಸಿಗೆ ತೆರಳಲು, ಬ್ರಹ್ಮಾದಿದೇವತೆಗಳಿಂದ ಪ್ರಾರ್ಥಿಸಲ್ಪಟ್ಟು ಅಗ್ನಿಯು ಆ ಶಿವವೀರ್ಯವನ್ನು ಗಂಗಾದೇವಿಯಲ್ಲಿ ಬಿಡಲು, ದೇವಿಯು ದಹಿಸಲಾರದೆ ಅಗ್ನಿಯು ಹೇಳಿದಂತೆ ಅದನ್ನು ಪ್ರವಾಹರೂಪವಾಗಿ ಹಿಮವತ್ಪರ್ವತದಲ್ಲಿ ಬಿಟ್ಟಳು. ಅದರಿಂದ ಹುಟ್ಟಿದ ಶಿಶುವಿಗೆ ಕ್ಷೀರಪಾನ ಮಾಡಿಸುವುದಕ್ಕಾಗಿ ದೇವತೆಗಳಿಂದ ನಿಯಮಿಸಲ್ಪಟ್ಟ ಕೃತ್ತಿಕೆಗಳು ಆ ಮಗುವಿಗೆ ಹಾಲನ್ನು ಕೊಡುತ್ತಿದ್ದರು. ಇವನೇ ಪ್ರಸಿದ್ಧನಾದ ಸ್ಕಂದನು ಸುವರ್ಣ, ರಜತ, ತಾಮ್ರ ಮೊದಲಾದ ಲೋಹಗಳೆಲ್ಲಾ ಆಗಲೇ ಉಂಟಾದವು.



ಬಾಲಕಾಂಡ - ೩೮ನೇ ಸರ್ಗ

ವಿಶ್ವಾಮಿತ್ರರು ಹೇಳುತ್ತಾರೆ.- ಇಕ್ಷ್ವಾಕು ವಂಶಸ್ಥನಾದ ಸಗರಚಕ್ರವರ್ತಿಯು ಕೇಶಿನಿ ಮತ್ತು ಸುಮತಿ ಎಂಬ ಇಬ್ಬರು ಪತ್ನಿಯರೊಡನೆ ಪುತ್ರಾಕಾಂಕ್ಷೆಯಿಂದ ತಪಸ್ಸು ಮಾಡುತ್ತಿದ್ದನು. ನಂತರ ಭೃಗುಮಹರ್ಷಿಯು ಇವರಿಂದ ಪೂಜಿಸಲ್ಪಟ್ಟು ಸಂತುಷ್ಟನಾಗಿ ಅನುಗ್ರಹಿಸಿದಂತೆ ಕೇಶಿನಿಗೆ ವಂಶೋದ್ಧಾರಕನಾದ ಅಸಮಂಜಸನೆಂಬ ಒಬ್ಬ ಮಗನೂ ಸುಮತಿಗೆ ೬೦೦೦೦ ಮಕ್ಕಳೂ ಅಭಿವೃದ್ಧಿಯಾದರು. ಅಸಮಂಜಸನು ದುಷ್ಟನಾದ್ದರಿಂದ ಪುರದಿಂದ ಹೊರಡಿಸಲ್ಪಟ್ಟನು. ಇವನ ಮಗನೇ ಅಂಶುಮಂತನು.



ಏವಂ ಪರ್ವತಸಂಬಾಧಂ ಜಂಬೂದ್ವೀಪಂ ನೃಪಾತ್ಮಜಾಃ ಖನಂತೋ ನೃಪಶಾರ್ದೂಲ ಸರ್ವತಃ ಪರಿಚಕ್ರಮುಃ

S.M.L

ಬಾಲಕಾಂಡ ೩೯ನೇ ಸರ್ಗ

ಸಗರ ಚಕ್ರವರ್ತಿಯು ಅಶ್ವಮೇಧಯಾಗಕ್ಕೆ ಪ್ರಾರಂಭಮಾಡಲು, ಇಂದ್ರನು ರಾಕ್ಷಸ ರೂಪದಿಂದ ಯಜ್ಞಾಶ್ವವನ್ನು ಅಪಹರಿಸಿದನು. ಅದನ್ನು ಹುಡುಕಿಕೊಂಡು ಬರಲು ಸಗರನು ತನ್ನ ೬೦,೦೦೦ ಮಂದಿ ಮಕ್ಕಳಿಗೆ ಅನುಜ್ಞೆ ಮಾಡಿದನು. ಕ್ರೂರರಾದ ಅವರೆಲ್ಲಾ ಭೂಮಿಯನ್ನು ಅಗೆದು ಸಿಕ್ಕಿದವರನ್ನೆಲ್ಲಾ ಯಜ್ಞಾಶ್ವಾಪಹಾರಿಗಳೆಂದು ಸಂಹರಿಸುತ್ತ ಪಾತಾಳಕ್ಕೆ ಬಂದರು.



ತತಸ್ತೇನಾಪ್ರಮೇಯೇನ ಕಪಿಲೇನ ಮಹಾತ್ಮನಾ। ಭಸ್ಮರಾಶೀಕೃತಾಸ್ಸರ್ವೇ ಕಾಕುತ್ಸ್ಥ ಸಗರಾತ್ಮಜಾಃ॥

೧.೪೦.

ಬಾಲಕಾಂಡ ೪೦ನೇ ಸರ್ಗ

ಪಾತಾಳದಲ್ಲಿ ಸಗರಪುತ್ರರು ಯಜ್ಞಾಶ್ವವನ್ನು ತಪಸ್ಸು ಮಾಡುತ್ತಿದ್ದ ಕಪಿಲ ಮುನಿಯ ಸಮೀಪದಲ್ಲಿ ಕಂಡು ಆತನೇ ಅಶ್ವಚೋರನೆಂದು ಭಾವಿಸಿ ಆತನ ಮೇಲೆ ಬೀಳುವುದಕ್ಕೆ ಹೋಗಿ ಆತನ ಹುಂಕಾರಮಾತ್ರದಿಂದ ಭಸ್ಮವಾಗಿಬಿಟ್ಟರು.



ಸಂಕ್ಷಿಪ್ತ ವಂಭ್ರಮೀಡ್ವಾಕ್ಯಂ ಸ್ವೈನತೇಯೋಮಹಾಬಲಃ। ಮಾತುಲಃ ಪುರುಷವ್ಯಾಘ್ರ ವಧೋಯಂ ಲೋಕಸಂಮತಃ

ಬಾಲಕಾಂಡ ೪೧ನೇ ಸರ್ಗ

ಬಹು ದಿನಗಳಾದರೂ ಮಕ್ಕಳು ಬಾರದೇ ಇರಲು, ಸಗರ ಚಕ್ರವರ್ತಿಯು ಅವರ ಗತಿಯನ್ನು ತಿಳಿದುಕೊಂಡು ಬರಲು, ಮೊಮ್ಮಗನಾದ ಅಂಶುಮಂತನಿಗೆ ಆಜ್ಞಾಪಿಸಿದನು. ಅಂಶುಮಂತನು ಸಗರಪುತ್ರರು ಭೂಮಿಯನ್ನು ಭೇದಿಸಿಕೊಂಡು ಹೋಗಿದ್ದ ಮಾರ್ಗದಲ್ಲಿಯೇ ಪಾತಾಳಕ್ಕೆ ಹೋಗಿ ಅಲ್ಲಿ ಯಜ್ಞಾಶ್ವವನ್ನೂ ಭಸ್ಮರಾಶಿಯಾಗಿರುವ ಆ ಸಗರಪುತ್ರರ ಗತಿಯನ್ನೂ ನೋಡಿ ದೋಲಾಯಮಾನನಾಗಿರಲಾಗಿ ಅವರ ಸೋದರಮಾವನಾದ ಗರುಡನು ಕಾಣಿಸಿಕೊಂಡು ಅವರ ನಾಶವು ಲೋಕಸಂಮತವಾದುದೆಂದು ತಿಳಿಸಿ, ಅವರಿಗೆ ಗತಿಯು ಪ್ರೇತ ಉದಕದಿಂದಲೇ ಆಗಬೇಕಾದ್ದರಿಂದಲೂ ಯಜ್ಞಾಶ್ವವನ್ನು ತೆಗೆದುಕೊಂಡು ಹೋಗಬಹುದೆಂದೂ ಹೇಳಿದನು



ಗಂಗಾಯಾಃ ಪತನಂ ರಾಜನ್ ಪೃಥಿವೀ ನ ಸಹಿಷ್ಯತಿ। ತಾಂ ವೈ ಧಾರಯಿತುಂ ವೀರ ನಾನ್ಯಂ ಪಶ್ಯಾಮಿ ಶೂಲಿನಃ

S.K.L.

ಬಾಲಕಾಂಡ ೪೨ನೇ ಸರ್ಗ

ಸಗರಚಕ್ರವರ್ತಿಯ ನಂತರ ಅಂಶುಮಂತನು, ಅವನ ಮಗ ದಿಲೀಪನೂ ಸಗರ ಪುತ್ರರಿಗೆ ಗತಿಹೊಂದಿಸುವುದಕ್ಕಾಗಿ ಗಂಗಾವತರಣದ ವಿಷಯದಲ್ಲಿ ದಿಕ್ಕುತೋಚದೆ ಸ್ವರ್ಗಸ್ಥರಾದರು. ನಂತರ ದಿಲೀಪನ ಮಗನಾದ ಭಗೀರಥನು ಅದೇ ಉದ್ದೇಶದಿಂದ ಗೋಕರ್ಣಕ್ಷೇತ್ರದಲ್ಲಿ ಉಗ್ರವಾದ ತಪಸ್ಸನ್ನು ಮಾಡಲು, ಬ್ರಹ್ಮನು ಪ್ರತ್ಯಕ್ಷವಾಗಿ ಗಂಗಾಪತನವನ್ನು ಸಹಿಸುವುದಕ್ಕೆ ಹರನೊಬ್ಬನೇ ಶಕ್ತನಾಗಿರುವನೆಂದು ಹೇಳಿ ಹೊರಟುಹೋದನು.



ಬಾಲಕಾಂಡ ೪೩ ನೇ ಸರ್ಗ

S.K.L.

ಬ್ರಹ್ಮನ ಅನುಜ್ಞೆಯ ಮೇರೆಗೆ ಭಗೀರಥನು ಶಂಕರನನ್ನು ಕುರಿತು ಒಂದು ವರ್ಷ ತಪಸ್ಸು ಮಾಡಲು, ಶಿವನು ಪ್ರಸನ್ನನಾಗಿ ಗಂಗೆಯನ್ನು ಧರಿಸುವೆನೆಂದು ಅಭಯಕೊಟ್ಟನು. ಗಂಗಾದೇವಿಯು ಮಹಾರಭಸದಿಂದ ಶಿವನ ತಲೆಯಮೇಲೆ ಬಿದ್ದಳು. ಗಂಗೆಯ ಮಹೋದ್ಧತವನ್ನು ತಿಳಿದು ಶಿವನು ಪ್ರವಾಹವನ್ನೆಲ್ಲ ತನ್ನ ಜಡೆಯಲ್ಲಿ ಅಂತರ್ಧಾನ ಮಾಡಿಸಿದನು. ಭಗೀರಥನು ಗಂಗೆಯನ್ನು ಕಾಣದೇ ಇನ್ನು ತಪಸ್ಸು ಮಾಡುತ್ತಿದ್ದನು. ಪರಮೇಶ್ವರನು ಸಂತುಷ್ಟನಾಗಿ ಗಂಗೆಯನ್ನು ಬಿಡಲು, ೭ ಪ್ರವಾಹಗಳಾಗಿ ಗಂಗೆಯು ಜಡೆಯಿಂದ ಹೊರಟಳು.



[illegible] ಮಹಾತೇಜಾಃ ಶ್ರೋತ್ರಾಭ್ಯಾಮಸೃಜತ್ಪುನಃ । ತಸ್ಮಾಜ್ಜಹ್ನುಸುತಾ ಗಂಗಾ ಪ್ರೋಚ್ಯತೇ ಜಾಹ್ನವೀತಿ ಚ

ಬಾಲಕಾಂಡ ೪೩ನೇ ಸರ್ಗ (೨)

ಪರಮೇಶ್ವರನ ಜಡೆಯಿಂದ ಹೊರಟ ಗಂಗಾಪ್ರವಾಹವು ಭಗೀರಥನ ರಥವನ್ನನುಸರಿಸಿ ಬರುವಾಗ ಜಹ್ನುಋಷಿಯ ಯಾಗಶಾಲೆಯನ್ನು ಕೊಚ್ಚಿಕೊಂಡು ಹೋಗಲು, ಆ ಮುನಿಯು ಕೋಪಗೊಂಡು. ಗಂಗೋದಕವನ್ನೆಲ್ಲಾ ಪಾನಮಾಡಿ ಬಿಟ್ಟನು. ಪುನಹಾ ಭಗೀರಥನಿಂದ ಪ್ರಾರ್ಥಿಸಲ್ಪಟ್ಟು ಗಂಗೆಯನ್ನು ತನ್ನ ಕಿವಿಯಿಂದ ಬಿಡಲು, ಪ್ರವಾಹವು ಭಗೀರಥನ ರಥವನ್ನು ಪುನಹಾ ಅನುಸರಿಸ ತೊಡಗಿತು.

ಭಸ್ಮನ್ಯಾಪ್ಲಾವಿತೇ ರಾಮ ಗಂಗಾಯಾಃ ಸಲಿಲೇನ ವೈ । ಸರ್ವಲೋಕಪ್ರಭುರ್ಬ್ರಹ್ಮಾ ರಾಜಾನಮಿದಮಬ್ರವೀತ್

ಬಾಲಕಾಂಡ ೪೪ನೇ ಸರ್ಗ

ಭಗೀರಥನ ರಥವನ್ನು ಅನುಸರಿಸಿದ್ದ ಗಂಗಾಪ್ರವಾಹವು ಪಾತಾಳಕ್ಕೆ ನುಗ್ಗಿ ಅಲ್ಲಿ ಭಸ್ಮರಾಶಿ ಬಿದ್ದಿದ್ದ ಸಗರಪುತ್ರರನ್ನೆಲ್ಲಾ ತೋಯಿಸಿದಾಗ ಅವರಿಗೆಲ್ಲ ಸದ್ಗತಿಯುಂಟಾಯಿತು. ಆಗ ಬ್ರಹ್ಮನು ಪ್ರತ್ಯಕ್ಷನಾಗಿ ಭಗೀರಥನಿಂದ ಸಾಧಿಸಲ್ಪಟ್ಟ ಗಂಗಾವತರಣದಿಂದ ಸಗರಪುತ್ರರಿಗೆ ಪ್ರಾಪ್ತವಾದ ಸ್ವರ್ಗಕ್ಕೆ [illegible] ಎಂದೂ ಗಂಗಾವತರಣದ ವಿಷಯವನ್ನು ಶ್ರೀರಾಮನಿಗೆ ವಿಶ್ವಾಮಿತ್ರನು ಹೇಳಿದನು.



ಉತ್ತರಂ ತೀರಮಾಸಾದ್ಯ ಸಂಪೂಜ್ಯರ್ಷಿಗಣಂ ತದಾ । ಗಂಗಾಕೂಲೇ ನಿವಿಷ್ಟಾಸ್ತೇ ವಿಶಾಲಾಂ ದದೃಶುಃ ಪುರೀಂ ॥ ಶ್ರೀ ॥ ॥ ಶ್ರೀ ॥

S.K.

ಬಾಲಕಾಂಡ ೪೫ನೇ ಸರ್ಗ (೧)

ಪ್ರಾತಃಕಾಲವಾದ ಮೇಲೆ ವಿಶ್ವಾಮಿತ್ರರು ಮುಂತಾದವರೊಡನೆ ರಾಮಲಕ್ಷ್ಮಣರು ಗಂಗಾನದಿಯನ್ನು ಹಡಗಿನಲ್ಲಿ ದಾಟಿ ಅದರ ಉತ್ತರತೀರದಲ್ಲಿದ್ದ ವಿಶಾಲಾಪಟ್ಟಣವನ್ನು ಕಂಡರು. ಆ ಪಟ್ಟಣದ ವೃತ್ತಾಂತವನ್ನು ಕೇಳಲಾಗಿ ವಿಶ್ವಾಮಿತ್ರರು ಹೇಳುತ್ತಾರೆ.

[illegible] ಪರ್ವತಂ [illegible] ಕೃತ್ವಾ [illegible] ಕ್ಷೀರೋದ [illegible] ॥ ಶ್ರೀ ॥ ॥ ಶ್ರೀ ॥

S.K.

ಬಾಲಕಾಂಡ ೪೫ನೇ ಸರ್ಗ (೨)

ಪೂರ್ವದಲ್ಲಿ ಧರ್ಮಿಷ್ಠರಾಗಿದ್ದ ದೇವತೆಗಳೂ ಬಲಿಷ್ಠರಾದ ದೈತ್ಯರೂ ಅಮೃತವನ್ನು ಪಡೆಯಬೇಕೆಂಬ ಆಶೆಯಿಂದ ಮಂದರಪರ್ವತವನ್ನು ಕಡಗೋಲನ್ನಾಗಿ ಮಾಡಿಕೊಂಡು ಅದಕ್ಕೆ ವಾಸುಕಿಯನ್ನು ಹಗ್ಗವಾಗಿ ಕಟ್ಟಿ ಕ್ಷೀರಸಮುದ್ರವನ್ನು ಮಥಿಸುತ್ತಿರಲು, ಪರ್ವತವು ಮುಳುಗಿಹೋಯಿತು. ಆಗ ಮಹಾವಿಷ್ಣುವು ಕೂರ್ಮರೂಪವನ್ನು ಧರಿಸಿ ಪರ್ವತವನ್ನು ಎತ್ತಿ ಹಿಡಿದನು. ಪುನಹಾ ಸಮುದ್ರವು ಮಥಿಸಲ್ಪಡಲು ಅಮೃತವುಂಟಾಯಿತು. ಅದನ್ನು ವಿಷ್ಣುವಿನ ಸಹಾಯದಿಂದ ದೇವತೆಗಳು ಪಡೆದು ಪಾನಮಾಡಿ ದೈತ್ಯರನ್ನೆಲ್ಲಾ ನಾಶಮಾ



ಹತಪುತ್ರಾಸ್ಮಿ ಭಗವಂಸ್ತ್ವತ್ಪುತ್ರೈಃ ಸುಮಹಾಬಲೈಃ । ಶಕ್ರಹಂತಾರಮಿಚ್ಛಾಮಿ ಪುತ್ರಂ ದೀರ್ಘತಪೋರ್ಜಿತಮ್ ॥

S.K.L.

ಬಾಲಕಾಂಡ ೪೬ನೇ ಸರ್ಗ

ಸಮುದ್ರಮಥನಕಾಲದಲ್ಲಿ ದೈತ್ಯರೆಲ್ಲಾ ಹತರಾಗಲು. ಹತಪುತ್ರಳಾದ ದಿತಿದೇವಿಯು ವ್ಯಸನಪಡುತ್ತಾ ದೀನಳಾಗಿ ಪತಿಯಾದ ಕಶ್ಯಪರನ್ನು ಕುರಿತು ಹತಪುತ್ರಳಾದ ತನಗೆ ಇಂದ್ರನನ್ನು ಜಯಿಸುವಂತಹ ಕುಮಾರನನ್ನು ಅನುಗ್ರಹಿಸಬೇಕೆಂದು ಬೇಡಿಕೊಂಡಳು. ಕಶ್ಯಪರು ಬಹುಕಾಲಯೋಗದಲ್ಲಿ ತಪಸ್ಸನ್ನಾಚರಿಸಿದರೆ ಅಂತಹ ಪುತ್ರನನ್ನು ಪಡೆಯಬಹುದೆಂದು ಹೇಳಿಕೊಟ್ಟರು.



ದೃಷ್ಟ್ವಾ ತಾಮಶುಚಿಂ ಶಕ್ರಃ ಪಾದತಃ ಕೃತಮೂರ್ಧಜಾಂ। ಶಿರಸ್ಥಾನೇ ಕೃತೌ ಪಾದೌ ಜಹಾಸ ಚ ಮುಮೋದ ಚ ॥

ಬಾಲಕಾಂಡ ೪೬ನೇ ಸರ್ಗ(೨)

ವ್ರತನಿಷ್ಠಳಾದ ದಿತಿದೇವಿಯು ದೈವವಶಾತು ಒಂದು ದಿನ ನಿದ್ರಾಪರವಶಳಾಗಿ ಶಿರವಿರುವ ಎಡೆಯಲ್ಲಿ ಪಾದಗಳನ್ನಿಟ್ಟು ನಿದ್ರೆಮಾಡುತ್ತಾ ಅಶುಚಿಯಾದಳು. ದಿತಿದೇವಿಗೆ ಸೇವೆ ಮಾಡುತ್ತಿದ್ದ ದೇವೇಂದ್ರನು ಅದೇ ಸಮಯವೆಂದು ತಿಳಿದು ಸೂಕ್ಷ್ಮರೂಪಿನಿಂದ ಗರ್ಭವನ್ನು ಪ್ರವೇಶಿಸಿ ಒಳಗಿನ ಗರ್ಭವನ್ನು ೭ ಭಾಗಗಳಾಗಿ ಛೇದಿಸಿದನು.

[illegible]

[illegible]

[illegible]

[illegible] — ೪೭ನೇ ಸರ್ಗ.

ದೇವೇಂದ್ರನಿಗೆ [illegible] ಈ ಸ್ಥಳದಲ್ಲಿ ವಿಶಾಲೆಯೆಂಬ ಪಟ್ಟಣವು ವಿಶಾಲನೆಂಬ ರಾಜನು ವಿಶಾಲತೆಯಿಂದ ಕಟ್ಟಿಸಿದನು. ಆತನ ವಂಶೀಯನಾದ ಸುಮತಿ ಎಂಬ ರಾಜನು ಈಗ ಈ ಪುರದಲ್ಲಿ ವಾಸಿಸುತ್ತಿದ್ದಾನೆಂದು ವಿಶ್ವಾಮಿತ್ರನು ಶ್ರೀರಾಮನಿಗೆ ತಿಳುಹಿಸಲು, ಅಷ್ಟರಲ್ಲಿಯೇ ಆ ಸುಮತಿ ರಾಜನು ಅವರನ್ನೆಲ್ಲಾ ಎದುರುಗೊಂಡು ಪೂಜಿಸಿದನು.



ಮಿಥಿಲೋಪವನೇ ತತ್ರ ಆಶ್ರಮಂ ದೃಶ್ಯ ರಾಘವಃ ಪುರಾಣಂ ನಿರ್ಜನಂ ರಮ್ಯಂ ಪಪ್ರಚ್ಛ ಮುನಿಪುಂಗವಂ ।

ಬಾಲಕಾಂಡ ೪೮ ನೇ ಸರ್ಗ.

ಸುಮತಿರಾಜನಿಂದ ಆತಿಥ್ಯವನ್ನು ಸ್ವೀಕರಿಸಿ ಶ್ರೀರಾಮಲಕ್ಷ್ಮಣರು ವಿಶ್ವಾಮಿತ್ರರನ್ನು ಕೂಡಿಸಿ ಮಿಥಿಲಾಪುರಕ್ಕೆ ಹೊರಟರು. ಆ ಪಟ್ಟಣದ ಉಪವನದಲ್ಲಿ ನಿರ್ಜನವಾಗಿರುವ ಆಶ್ರಮವನ್ನು ಕಂಡು ಅದು ಯಾವ ಮಹಾತ್ಮರದ್ದೆಂದು ಶ್ರೀರಾಮನು ವಿಶ್ವಾಮಿತ್ರರನ್ನು ಪ್ರಶ್ನೆ ಮಾಡಲಾಗಿ ಗೌತಮ ಅಹಲ್ಯೆಯರ ವೃತ್ತಾಂತವನ್ನು ವಿಶ್ವಾಮಿತ್ರರು ಹೇಳುತ್ತಾರೆ.



ಮಮ ರೂಪಂ ಸಮಾಸ್ಥಾಯ ಕೃತವಾನಸಿ ದುರ್ಮತೇ । ಅಕರ್ತವ್ಯಮಿದಂ ತಸ್ಮಾದ್ವಿಫಲಸ್ತ್ವಂ ಭವಿಷ್ಯಸಿ ॥ ತಥಾ ಶಪ್ತ್ವಾ [illegible] ವತ್ಸ್ಯಸಿ ॥

ಬಾಲಕಾಂಡ ೪೮ನೇ ಸರ್ಗ.

S.K.L.

ದೇವೇಂದ್ರನು ಗೌತಮರ ರೂಪವನ್ನು ಧರಿಸಿ ಗೌತಮರ ಪತ್ನಿಯಾದ ಅಹಲ್ಯೆಯೊಡನೆ ಸಂಗಮಿಸಿ ಹೊರಟುಹೋಗುತ್ತಿರಲು, ಗೌತಮರು ಕಂಡು ಅವನಿಗೆ ತಕ್ಕ ಫಲಿ ಹಾಳಾಗಿಹೋಗಲಿ ಎಂದು ಶಪಿಸಿದ್ದಲ್ಲದೆ ಪತ್ನಿಯಾದ ಅಹಲ್ಯೆಗೂ ಬಹು ವರ್ಷಗಳು ತಿರೋರೂಪಳಾಗಿರೆಂದು ಶಾಪ ಕೊಟ್ಟರು.



ಬಾಲಕಾಂಡ ೪೯ ನೇ ಸರ್ಗ. (೧)

ಗೌತಮಮಹರ್ಷಿ ಶಿಲೆಯಾಗಿ ಬಿದ್ದಿರುವ ಅಹಲ್ಯೆಯನ್ನು ಉದ್ಧಾರಮಾಡಬೇಕಾಗಿ ವಿಶ್ವಾಮಿತ್ರರು ಶ್ರೀರಾಮನಿಗೆ ಹೇಳಿದರು, ಅದರಂತೆಯೇ ಶ್ರೀರಾಮನು ಆ ಶಿಲೆಯಮೇಲೆ ಕಾಲಿಟ್ಟ ಕೂಡಲೆ ಶಾಪವಿಮೋಚನೆಯಾಗಿ ಎದ್ದುಬಂದ ಅಹಲ್ಯೆಯನ್ನು ರಾಮಲಕ್ಷ್ಮಣರು ಕಂಡರು.



ಗೌತಮೋಽಪಿ ಮಹಾತೇಜಾ ಅಹಲ್ಯಾಸಹಿತಃ ಸುಖೀ। ರಾಮಂ ಸಂಪೂಜ್ಯ ವಿಧಿವತ್ ತಪಸ್ತೇಪೇ ಮಹಾತಪಾಃ ॥

ಬಾಲಕಾಂಡ ೪೯ ನೇ ಸರ್ಗ (೨)

ಶಾಪವಿಮೋಚನೆಯಾಗಿ ಪುನಃ ಸತಿಯಾದ ಅಹಲ್ಯೆಯೊಡನೆ ಗೌತಮರು ರಾಮಲಕ್ಷ್ಮಣರನ್ನು ಪೂಜಿಸಿದರು.



ಧನ್ಯೋಽಸ್ಮ್ಯನುಗೃಹೀತೋಽಸ್ಮಿ ಯಸ್ಯ ಮೇ ಮುನಿಪುಂಗವ । ಯಜ್ಞೋಪಸದನಂ ಬ್ರಹ್ಮನ್ ಪ್ರಾಪ್ತೋಽಸಿ ಮುನಿಭಿಃ ಸಹ ॥

ಬಾಲಕಾಂಡ ೫೦ನೇ ಸರ್ಗ

ಸುಮತಿರಾಜನ ಆತಿಥ್ಯವನ್ನು ಸ್ವೀಕರಿಸಿ, ಶ್ರೀರಾಮಲಕ್ಷ್ಮಣರು ವಿಶ್ವಾಮಿತ್ರರೊಡನೆ ಮಿಥಿಲಾಪುರಕ್ಕೆ ಹೊರಟರು. ಅಲ್ಲಿನ ಉಪವನದಲ್ಲಿ ಅಹಲ್ಯೋದ್ಧಾರ ಮಾಡಿ ಅಹಲ್ಯಾಗೌತಮರಿಂದ ಪೂಜಿಸಲ್ಪಟ್ಟು ಜನಕರಾಜನ ಯಾಗಶಾಲೆಗೆ ತೆರಳಲು, ಜನಕರಾಜನು ಅವರಿಗೆಲ್ಲಾ ಪ್ರತ್ಯುತ್ಥಾನಮಾಡಿ ಯೋಗ್ಯವಾದ ಆಸನಗಳಲ್ಲಿ ಕುಳ್ಳಿರಿಸಿ ಅವರ ಆಗಮನದಿಂದ ಬಹುಧನ್ಯನಾದೆನೆಂದು ಸಂತೋಷದಿಂದ ಹೇಳಿಕೊಂಡನು.



ಬಾಲಕಾಂಡ - ೫೧ನೇ ಸರ್ಗ

ಜನಕರಾಜನ ಪುರೋಹಿತನಾದ ಶತಾನಂದಮುನಿಯು ಶಾಪವಿಮೋಚಿತಳಾದ ತನ್ನ ತಾಯಿಯಾದ ಅಹಲ್ಯೆಯ ವೃತ್ತಾಂತವನ್ನೆಲ್ಲ ಕೇಳಿ ಶ್ರೀರಾಮನನ್ನು ಕುರಿತು ವಿಶ್ವಾಮಿತ್ರರು ಬ್ರಹ್ಮರ್ಷಿತ್ವವನ್ನು ಪಡೆದ ವೃತ್ತಾಂತವನ್ನು ತಿಳುಹಿಸಲು ಉಪಕ್ರಮಿಸಿದನು



S.K.L.

ಬಾಲಕಾಂಡ - ೫೨ ನೇ ಸರ್ಗ.

ಪೂರ್ವದಲ್ಲಿ ಈ ವಿಶ್ವಾಮಿತ್ರನು ಕುಶಿಕವಂಶದಲ್ಲಿ ರಾಜನಾಗಿ ಬಹುಸಹಸ್ರವರುಷ ರಾಜ್ಯವನ್ನು ಆಳುತ್ತಿದ್ದನು. ಆತನು ಸೈನ್ಯಸಮೇತನಾಗಿ ಭೂಮಿಯಲ್ಲಿ ಸಂಚರಿಸುತ್ತಾ ಒಂದು ದಿನ ವಸಿಷ್ಠರ ಆಶ್ರಮಕ್ಕೆ ಬಂದು ಅವರನ್ನು ವಂದಿಸಿ ಅವರ ಆತಿಥ್ಯವನ್ನು ಸ್ವೀಕರಿಸಿದನು. ಆಗ ವಸಿಷ್ಠರು ತಮ್ಮಲ್ಲಿದ್ದ ಕಾಮಧೇನುವನ್ನು ಕರೆದು ಬಂದಿದ್ದವರಿಗೆಲ್ಲಾ ಆತಿಥ್ಯಕ್ಕೋಸ್ಕರ ಅನ್ನಾದಿಗಳನ್ನು ಸೃಜಿಸಿ ತೃಪ್ತಿಪಡಿಸಬೇಕೆಂದು ಅಜ್ಞಾಪಿಸಿದರು.



ಇತಿ ಮುಕ್ತಸ್ತು ಭಗವಾನ್ [illegible]

S.R.L

ಬಾಲಕಾಂಡ - ೫೩ನೇ ಸರ್ಗ

ಕಾಮಧೇನುವಿನಿಂದ ಸತ್ಕಾರಪಡೆದ ವಿಶ್ವಾಮಿತ್ರನು ಆಶ್ಚರ್ಯಯುಕ್ತನಾಗಿರುವ ಆ ಕಾಮಧೇನುವನ್ನು ತನಗೆ ಕೊಡಬೇಕೆಂದು ವಸಿಷ್ಠರನ್ನು ಬಹು ವಿಧವಾಗಿ ಕೇಳಿಕೊಳ್ಳಲು, ಅವರು ಸರ್ವಥಾ ಕೊಡುವುದಿಲ್ಲವೆಂದು ಹೇಳಿದರು.



ಬಾಲಕಾಂಡ - ೫೪ ನೇ ಸರ್ಗ.

ವಸಿಷ್ಠರು ಕಾಮಧೇನುವನ್ನು ಕೊಡದೇ ಇರಲು, ವಿಶ್ವಾಮಿತ್ರನು ಬಲಾತ್ಕಾರದಿಂದ ಆ ಧೇನುವನ್ನು ಸೆಳೆದನು. ಧೇನುವು ವಸಿಷ್ಠರನ್ನು ನೋಡಿ ರೋದನಮಾಡಿತು. [illegible] ಸೇನೆಯನ್ನು ಸೃಜಿಸೆಂದು [illegible] ಹೇಳಲು, ಸುರಭಿಯು [illegible] ಸಂಖ್ಯಾತರಾದ ಮ್ಲೇಚ್ಛರು, ಯವನರು, ಶಕರು, ಪಹ್ಲವರು ಮೊದಲಾದವರನ್ನು ಸೃಜಿಸಿದಳು. ಅಂತಹವರಿಂದ ಸಂಹೃತರಾದ ತನ್ನ ಸೇನೆಯನ್ನು ಕಂಡು ವಿಶ್ವಾಮಿತ್ರನು ಅವರನ್ನೂ ಸಂಹಾರಮಾಡುತ್ತಿರಲು, ಧೇನುವು ಆಯುಧಗಳನ್ನು ಮಾಡುವ ಯೋಧರನ್ನು ಸೃಷ್ಟಿಸಿತು.



ಬಾಲಕಾಂಡ [illegible]

ಕೋಪದಿಂದ ಉದ್ರಿಕ್ತರಾದವರ[illegible] [illegible] ಮಂದಿ ಮಕ್ಕಳು ಸಂಪೂರ್ಣವಾಗಿ ವಸಿಷ್ಠಮುನಿಯ ಮೇಲೆ [illegible], ಅವರು [illegible] ಹುಂಕಾರಮಾತ್ರದಿಂದ [illegible] ಮಂದಿಯನ್ನೂ [illegible] ಮಾಡಿದರು.



ಗತ್ವಾ ಹಿಮವತ್ಪಾರ್ಶ್ವಂ ಕಿನ್ನರೋರಗಸೇವಿತಂ। ಮಹಾದೇವ ಪ್ರಸಾದಾರ್ಥಂ ತಪಸ್ತೇಪೇ ಮಹಾತಪಾಃ॥

S.K.L

ಬಾಲಕಾಂಡ ೫೫ನೇ ಸರ್ಗ.

ಮಕ್ಕಳೆಲ್ಲಾ ವಸಿಷ್ಠರಿಂದ ನಾಶವಾಗಲು, ವಿಶ್ವಾಮಿತ್ರನು ದುಃಖಿತನಾಗಿ ಹಿಮವತ್ಪಾರ್ಶ್ವದಲ್ಲಿ ಪರಮೇಶ್ವರನನ್ನು ಕುರಿತು ತಪಸ್ಸುಮಾಡಿದನು. ಶಂಕರನು ಪ್ರತ್ಯಕ್ಷವಾಗಲು, ಪ್ರಸನ್ನನಾದ ಧನುರ್ವೇದವೂ ಅಸ್ತ್ರವಿದ್ಯೆಯೂ ತನಗೆ ಉಂಟಾಗಬೇಕೆಂದು ಕೇಳಿಕೊಂಡು ಪಡೆದುಕೊಂಡನು.



ವಸಿಷ್ಠೋಜಪತಾಂಶ್ರೇಷ್ಠಸ್ತದಪ್ಯಸ್ತ್ರಮನಾಶಯತ್ [illegible] ಗ್ರಸತೇ ಬ್ರಹ್ಮ [illegible] ||

ಬಾಲಕಾಂಡ - ೫೬ನೇ ಸರ್ಗ

S.K.L.

ಈಶ್ವರನ ವರದಿಂದ ಗರ್ವಿಷ್ಠನಾದ ವಿಶ್ವಾಮಿತ್ರನು ವಸಿಷ್ಠರ ಆಶ್ರಮಕ್ಕೆ ಹೋಗಿ ಪ್ರಳಯವನ್ನೆಬ್ಬಿಸುವಂತೆ ಅಸ್ತ್ರಗಳನ್ನು ಬಿಡುತ್ತಿರಲು, ವಸಿಷ್ಠರು ಕೋಪಗೊಂಡು ಬ್ರಹ್ಮದಂಡವನ್ನು ತೆಗೆದುಕೊಂಡು ನಿಂತುಕೊಂಡರು. ವಿಶ್ವಾಮಿತ್ರನು ಅವರ ಮೇಲೆ ಪ್ರಯೋಗಿಸಿದ ಅಸ್ತ್ರಗಳೆಲ್ಲಾ ವ್ಯರ್ಥವಾಗಿ ಆ ಬ್ರಹ್ಮದಂಡದಿಂದ ನುಂಗಲ್ಪಟ್ಟವು.

[illegible]

ಬಾಲಕಾಂಡ — ದ್ವಿತೀಯಸರ್ಗ.


[illegible] ಬ್ರಹ್ಮನು ವಾಲ್ಮೀಕಿಗೆ ರಾಮಾಯಣವನ್ನು ರಚಿಸಲು ಹೇಳುವನು.

[illegible]

S. K

ಬಾಲಕಾಂಡ - ೫೮ನೇ ಸರ್ಗ


ತ್ರಿಶಂಕು ಎಂಬ ರಾಜನಿಗೆ ಸಶರೀರ ಸ್ವರ್ಗಕ್ಕಾಗಿ ಹೋಮ ಮಾಡಲು ವಸಿಷ್ಠರು ತಿರಸ್ಕರಿಸಿದರು. ಅನಂತರ ಅವನು ವಸಿಷ್ಠರ ಪುತ್ರರನ್ನು ಯಾಗವನ್ನು ಮಾಡಿಸಬೇಕೆಂದು ಕೇಳಿಕೊಂಡನು. ಅವರೂ ಸಾಧ್ಯವಿಲ್ಲವೆಂದು ಹೇಳಿದರು. ಇದಕ್ಕೆ ರಾಜನು [illegible] ಸ್ಕರ ಮಾಡಲು, ರಾಜನಿಗೆ ಚಂಡಾಲನಾಗೆಂದು ಅವರು ಶಾಪ ಕೊಟ್ಟರು.



ಸೋನ್ಯಾಂಗತಿಂಗಮಿಷ್ಯಾಮಿ ನಾನ್ಯಃ ಶರಣಮಸ್ತಿಮೇ। ದೈವಂಪುರುಷಕಾರೇಣನಿವರ್ತಯಿತು ಮರ್ಹಸಿ॥

ಬಾಲಕಾಂಡ - ೫೮ನೇ ಸರ್ಗ(೨)

ವಸಿಷ್ಠಪುತ್ರರಿಂದ ಶಪಿಸಲ್ಪಟ್ಟು ಚಂಡಾಲನಾದ ತ್ರಿಶಂಕುಮಹಾರಾಯನು ವಿಶ್ವಾಮಿತ್ರನನ್ನು ಕಂಡು ತನಗೆ ಬಂದ ಅವಸ್ಥೆಯನ್ನೆಲ್ಲಾ ಹೇಳಿಕೊಂಡು ತನ್ನನ್ನು ಅನುಗ್ರಹಿಸಬೇಕೆಂದು ಕೇಳಿಕೊಂಡನು.



ಏದೋಽಸ್ಮಯತ್ನ ಮಹ್ಮಂಮೊಂತ್ರಸ ಉಗ್ರಂ ಸೆವಾಸ್ಸತಾಂ ಸ್ಸಿಭೂತಾ ದು ಮಾನ್ಯಾನೋ ಭವಿಷ್ಯಂತಿ ಪದೇಪದೇ ಕ್ರಂಯ:

S. K. L

ಬಾಲಕಾಂಡ - ೫೯ ನೇ ಸರ್ಗ.

ವಿಶ್ವಾಮಿತ್ರನು ತ್ರಿಶಂಕುವಿಗೆ ಸಶರೀರ ಸ್ವರ್ಗಕ್ಕಾಗಿ ಯಾಗಮಾಡಿಸುತ್ತೇನೆಂದು ಅಭಯಕೊಟ್ಟು ಅದಕ್ಕಾಗಿ ಋಷಿಗಳನ್ನು ಕರೆತರುವಂತೆ ಶಿಷ್ಯರಿಗೆ ಆಜ್ಞಾಪಿಸಿದನು. ಅವರು ಕೆಲವರನ್ನು ಕರೆತಂದರು. ವಸಿಷ್ಠಪುತ್ರರು ಈ ಪ್ರಯತ್ನವನ್ನು ಮಾಡಿದ್ದಕ್ಕೆ ತನ್ನನ್ನು ನಿಂದಿಸಿದ್ದನ್ನು ಕೇಳಿ ಸಿಟ್ಟುಗೊಂಡು ಆ ವಸಿಷ್ಠಪುತ್ರರೆಲ್ಲಾ ಜಾತ್ಯಧಮರಾಗಿ ನಾಯಿ ಶವವನ್ನು ತಿಂಬುವ ಹಾಗೆ ಶಪಿಸಿದನು.

ಪತಮಾನೋ ಮಹೇಂದ್ರೇಣ ತ್ರಾಹೀತಿ ಚುಕ್ರೋಶ ಮಾನಸಾತ್ ಚೀತಿ ವಿಶ್ವಾಮಿತ್ರಂ ತಪೋಧನಂ ॥

ಬಾಲಕಾಂಡ - ೬೦ನೇ ಸರ್ಗ

S. K. L.

ಬಂದಿದ್ದ ಋಷಿಗಳೊಡನೆ ಯಾಗವನ್ನು ಮಾಡಿ ತ್ರಿಶಂಕುವನ್ನು ಸಶರೀರನಾಗಿ ಸ್ವರ್ಗಕ್ಕೆ ಹೋಗುವಂತೆ ಮಾಡಲು, ಗುರುಶಾಪಗ್ರಸ್ತನಾದ್ದರಿಂದ ಸ್ವರ್ಗದಲ್ಲಿರಲು ಯೋಗ್ಯನಲ್ಲವೆಂದು ಇಂದ್ರನಿಂದ ಹೊರ್ದೂಡಲ್ಪಟ್ಟು ಅವನು ತಲೆಕೆಳಗಾಗಿ ಬೀಳುತ್ತ ವಿಶ್ವಾಮಿತ್ರನನ್ನು ಕುರಿತು ಮೊರೆಯಿಡುತ್ತಿರಲು, ವಿಶ್ವಾಮಿತ್ರನು ತನ್ನ ತಪೋಬಲದಿಂದ ಅವನು ಅಂತರಿಕ್ಷದಲ್ಲಿಯೇ ನಿಲ್ಲುವಂತೆ ಮಾಡಿದನು.

ಏತಚ್ಛ್ರುತ್ವಾ ಮಹಾರಾಜ ... ಮಧ್ಯಮಂ ಮಧ್ಯಮೇ ರಾಜ ಪುತ್ರಂ ನಯಸ್ವ ನೃಪೋತ್ತಮ ॥

ಬಾಲಕಾಂಡ - ೬೧ನೇ ಸರ್ಗ S.K.

ಪುನಃ ವಿಶ್ವಾಮಿತ್ರನು ತಪಸ್ಸು ಮಾಡುತ್ತಿರಲು, ಆ ಕಾಲದಲ್ಲಿ ಯಜ್ಞಕ್ಕೆ ಪ್ರಾರಂಭ ಮಾಡಿದ್ದ ಅಂಬರೀಷ ರಾಜನ ಯಜ್ಞಪಶು, ವಸ್ತು ಚೋರರಿಂದ ಅಪಹರಿಸಲು, ಅದರ ಬದಲು ನರಪಶುವನ್ನು ತಂದು ಗೆ ಉಪಾಧ್ಯಾಯನು ಹೇಳಿದ ಮೇಲೆ ಪ್ರತ್ಯಾಮ್ನಾಯವಾಗಿ ಕೊಡತಕ್ಕದ್ದಾಗಿದ್ದ ಬಹು ಗೋವುಗಳನ್ನು ಕೊಟ್ಟು ಆತನು ಋಚೀಕನಿಂದ ಬಿಕ್ಕರಿಸಿಯು ಬೆಳೆಯುತ್ತಿ ಒಂದು ಶೀಘ್ರವಾಗಿ ಹಿರಿ ಮಗನನ್ನು ಕೊಡಲಾರೆನೆಂದು ತಂದೆಯೂ, ಕಿರಿ ಮಗನನ್ನು ಕೊಡೆನೆಂದು ತಾಯಿಯೂ ಹೇಳುತ್ತಿರಲು ಮಧ್ಯಮ ಸುತನಾದ ಶುನಃಶೇಪನೆಂಬುವನು ತಾನು ಹೋಗುವುದಕ್ಕೆ ಒಪ್ಪಿಕೊಂಡನು.

ತನ್ನ [illegible] ವಿಶ್ವಾಮಿತ್ರ [illegible] ಶುನಃಶೇಪನು [illegible]

ಬಾಲಕಾಂಡ - ೬೨ ನೇ ಸರ್ಗ

ಶುನಃಶೇಪನೊಡನೆ ಹಿಂತಿರುಗುವ ಅಂಬರೀಷರಾಜನು ದಾರಿಯಲ್ಲಿ ವಿಶ್ರಮಿಸಿಕೊಳ್ಳುತ್ತಿರಲು, ಶುನಃಶೇಪನು ಅಲ್ಲೇ ಪುಷ್ಕರದಲ್ಲಿ ತಪಸ್ಸು ಮಾಡುತಿದ್ದ ತನ್ನ ಸೋದರಮಾವನಾದ ವಿಶ್ವಾಮಿತ್ರನನ್ನು ಕಂಡು ಅಳುತ್ತಾ ತನ್ನನ್ನು ಸಂರಕ್ಷಿಸಬೇಕೆಂದು [illegible] ಬೇಡಿಕೊಂಡನು. ವಿಶ್ವಾಮಿತ್ರನು ತನ್ನ ಪುತ್ರರನ್ನು ಕರೆದು ಯಜ್ಞಪಶುವಾಗಿ ಅಂಬರೀಷನೊಡನೆ ಹೋಗಿ [illegible] ಶುನಃಶೇಪನನ್ನು ಬಿಡಿಸಬೇಕೆಂದು ಅವರಿಗೆಲ್ಲಾ ಹೇಳಲು, ಅನ್ಯರ ಮಕ್ಕಳನ್ನು [illegible] ತಮ್ಮ ಮಕ್ಕಳನ್ನು ಬಲಿಕೊಡುವುದು [illegible] ಅವರೆಲ್ಲಾ [illegible] ಶುನಃಶೇಪನಿಗೆ ಇಂದ್ರೋಪೇಂದ್ರ ಮಂತ್ರವನ್ನು ಉಪದೇಶ ಮಾಡಿದನು.



ಸ ಬದ್ಧ್ವಾ ವಾಗ್ಭಿರಗ್ರ್ಯಾಭಿರಭಿತುಷ್ಟಾವ ವೈ ಸುರೌ। ಇಂದ್ರಮಿಂದ್ರಾನುಜಂ ಚೈವ ಯಥಾವನ್ಮುನಿದಾರಕಃ ॥

ಬಾಲಕಾಂಡ - ೬೨ ನೇ ಸರ್ಗ (೨)

ಶುನಃಶೇಪನು ಅಂಬರೀಷರಾಯನಿಂದ ಯಜ್ಞದಲ್ಲಿ ಯೂಪಸ್ತಂಭದಲ್ಲಿ ಕಟ್ಟಲ್ಪಟ್ಟು ಇಂದ್ರೋಪೇಂದ್ರ ಮಂತ್ರಗಳನ್ನು ಜಪಿಸಿ ಬದುಕಿದನು. ಅಂಬರೀಷನಿಗೆ ಯಜ್ಞಫಲವೂ ಉಂಟಾಯಿತು.



[illegible] ಮೇನಕಾ [illegible]

ಬಾಲಕಾಂಡ - ೬೩ ನೇ ಸರ್ಗ.

ವಿಶ್ವಾಮಿತ್ರನ ತಪಸ್ಸಿಗೆ ಮೆಚ್ಚಿ ಬ್ರಹ್ಮನು ನೀನು ಋಷಿಯಾದೆ ಎಂದು ಹೇಳಿ ಹೊರಟು ಹೋದನು. [illegible] ಅಪ್ಸರಸ್ತ್ರೀಯಾದ ಮೇನಕೆಯು ಸ್ನಾನಮಾಡುತ್ತಿರುವುದನ್ನು ನೋಡಿ ಅವಳನ್ನು ಮೋಹಿಸಿ [illegible] ಅವಳೊಡನೆ ಸುಖಪಡುತ್ತಿದ್ದನು. ನಂತರ ತನ್ನ ತಪಸ್ಸಿಗೆ ನಾಶಕರವಾದ [illegible] [illegible] ವಿಶ್ವಾಮಿತ್ರನು [illegible] [illegible]



ಬಾಲಕಾಂಡ - ೬೪ ನೇ ಸರ್ಗ

ವಿಶ್ವಾಮಿತ್ರನ ತಪಸ್ಸಿಗೆ ಇಂದ್ರನು ಭಯಪಟ್ಟು ಆ ತಪಸ್ಸಿಗೆ ವಿಘ್ನವನ್ನುಂಟುಮಾಡಲು ರಂಭೆಯನ್ನು ಕಳುಹಿಸಿದನು. ಸಮೀಪದಲ್ಲಿ ಗಾನ ಮಾಡುತ್ತಿದ್ದ ಆ ರಂಭೆಯನ್ನು ಕಂಡು ಇದೆಲ್ಲಾ ಇಂದ್ರನ ವ್ಯಾಪಾರವೆಂದು ತಿಳಿದು ತನ್ನನ್ನು ವಂಚಿಸಿದ ಈ ರಂಭೆಗೆ ಶಿಲಾರೂಪಳಾಗು ಎಂದು ಶಪಿಸಿ ಪುನಃ ತಪಸ್ಸಿಗೆ ಕೂತುಕೊಂಡನು.



ಬ್ರಹ್ಮರ್ಷಿತ್ವಂ ನ ಸಂದೇಹಃ ಸರ್ವಂ ಸಂಪದ್ಯತೇ ತವ। ಇತ್ಯುಕ್ತ್ವಾ ದೇವತಾಶ್ಚಾಪಿ ಸರ್ವಾ ಜಗ್ಮುರ್ಯಥಾಗತಮ್॥ ೨೧ ॥

ಬಾಲಕಾಂಡ - ೬೫ನೇ ಸರ್ಗ

ವಿಶ್ವಾಮಿತ್ರರು ಉಗ್ರ ತಪಸ್ಸನ್ನಾಚರಿಸುತ್ತಿರಲು, ಬ್ರಹ್ಮಾದಿದೇವತೆಗಳೆಲ್ಲಾ ಬಂದು ನೀನು ಬ್ರಾಹ್ಮಣ್ಯವನ್ನು ಪಡೆದಿರುವೆ ಎಂದು ಅವರಿಗೆ ಹೇಳಲು, ವಸಿಷ್ಠರಿಂದ ಅದೇ ರೀತಿಯಲ್ಲಿ ನುಡಿಸಬೇಕೆಂದು ಅವರು ಅಪೇಕ್ಷಿಸಿದ್ದಕ್ಕೆ ವಸಿಷ್ಠರನ್ನು ಕರೆತಂದು ಅವರಿಂದಲೂ ಅದೇ ರೀತಿಯಲ್ಲಿ ಹೇಳಿಸಿದರು.



ಅಥ ಮೇ ಕೃಷತಃ ಕ್ಷೇತ್ರಂ ಲಾಂಗಲಾದುತ್ಥಿತಾ ಮಮ । ಕ್ಷೇತ್ರಂ ಶೋಧಯತಾ ಲಬ್ಧಾ ನಾಮ್ನಾ ಸೀತೇತಿ ವಿಶ್ರುತಾ ॥

ಬಾಲಕಾಂಡ - ೬೬ನೇ ಸರ್ಗ

ಪೂರ್ವದಲ್ಲಿ ಯಜ್ಞಕ್ಕೋಸ್ಕರ ಭೂಮಿಯನ್ನು ಉಳುತ್ತಿರಲು, ಆಗ ಸೀತೆ ಎಂಬ ಕನ್ಯೆ ದೊರಕಿದಳು. ಆಗ ನನ್ನಲ್ಲಿದ್ದ ಈ ಶ್ರೇಷ್ಠವಾದ ಧನುಸ್ಸನ್ನು ಆರೋಹಣ ಮಾಡಿದವರಿಗೆ ಈ ಕನ್ಯೆಯನ್ನು ವಿವಾಹ ಮಾಡಿ ಕೊಡುತ್ತೇನೆಂದಾಗ ಉದ್ದೇಶ ಮಾಡಿದ್ದರಿಂದ ಇದಕ್ಕಾಗಿ ಬಹುಮಂದಿ ರಾಜರು ಬಂದು ಪರಾಜಿತರಾಗಿ ಹೋದ ವೃತ್ತಾಂತವ ರಾಜನು ವಿಶ್ವಾಮಿತ್ರನಿಗೆ ಹೇಳಿದನು.

ಆರೋಪಯಿತ್ವಾ ಧರ್ಮಾತ್ಮಾ ಪೂರಯಾಮಾಸ ತದ್ಧನುಃ। ತದ್ಬಭಂಜ ಧನುರ್ಮಧ್ಯೇ ನರಶ್ರೇಷ್ಠೋ ಮಹಾಯಶಾಃ॥

ಬಾಲಕಾಂಡ-೬೭ನೇ ಸರ್ಗ.

ವಿಶ್ವಾಮಿತ್ರನ ಕೋರಿಕೆಯಂತೆ ಜನಕರಾಜನು ಶೈವಧನುಸ್ಸನ್ನು ತರಿಸಲು, ಶ್ರೀರಾಮನು ಜನಕ ಮತ್ತು ವಿಶ್ವಾಮಿತ್ರರ ಅಪ್ಪಣೆಯನ್ನು ಪಡೆದು ಆ ಧನುಸ್ಸನ್ನು ಹಿಡಿದು ಹೆದೆಯನ್ನು ಎಳೆಯಲು, ಧನುಸ್ಸು ಮಧ್ಯದಲ್ಲಿ ಮುರಿದು ಹೋಯಿತು. ಅದರಿಂದುಂಟಾದ ಶಬ್ದದಿಂದ ಸಭೆಯಲ್ಲಿದ್ದವರೆಲ್ಲಾ ಮೋಹಿತರಾಗಿದ್ದರು. ಜನಕರಾಜನು ತಾನು ಪ್ರತಿಜ್ಞೆ ಮಾಡಿದ್ದಂತೆ ತನ್ನ ಮಗಳಾದ ಸೀತಾದೇವಿಯನ್ನು ಶ್ರೀರಾಮನಿಗೆ ವಿವಾಹ ಮಾಡಿ ಕೊಡುವುದಾಗಿ ವಿಶ್ವಾಮಿತ್ರರಿಗೆ ತಿಳಿಸಿ ಈ ವಿಷಯಗಳನ್ನೆಲ್ಲಾ ದಶರಥ ರಾಯನಿಗೆ ತಿಳುಹಿಸಿ ಕರೆತರುವಂತೆ ದೂತರನ್ನು ಅಯೋಧ್ಯೆಗೆ ಕಳುಹಿಸಿದನು



ಬದ್ಧಾಂಜಲಿಪುಟಾಸ್ಸರ್ವೇ ದೃಷ್ಟ್ವಾ ವಿಗತಸಾಧ್ವಸಾಃ । ರಾಜಾನಂ ಪ್ರಯತಾ ವಾಕ್ಯಮಬ್ರುವನ್ ಮಧುರಾಕ್ಷರಂ ॥

ಬಾಲಕಾಂಡ ೬೮ನೇ ಸರ್ಗ

ಜನಕರಾಯನಿಂದ ಕಳುಹಿಸಲ್ಪಟ್ಟ ದೂತರು ದಶರಥರಾಯನ ಸನ್ನಿಧಿಗೆ ಹೋಗಿ ಶ್ರೀರಾಮನು ಶೈವಧನುಸ್ಸನ್ನು ಮುರಿದ ವಿಷಯವನ್ನೂ ಸೀತಾದೇವಿಯನ್ನು ಶ್ರೀರಾಮನಿಗೆ ಕನ್ಯಾದಾನ ಮಾಡಬೇಕೆಂದು ಜನಕರಾಯನು ನಿಶ್ಚಯಿಸಿರುವುದನ್ನೂ ಅರಿಕೆ ಮಾಡಿದರು.



ಸ್ವಾಗತಂ ತೇ ಮಹಾರಾಜ ದಿಷ್ಟ್ಯಾ ಪ್ರಾಪ್ತೋಸಿ ರಾಘವ। ಪುತ್ರಯೋರುಭಯೋಃ ಪ್ರೀತಿಂ ಲಪ್ಸ್ಯಸೇ ವೀರ್ಯನಿರ್ಜಿತಾಂ॥

S.K.L

ಬಾಲಕಾಂಡ - ೬೯ ನೇ ಸರ್ಗ

ಜನಕದೂತರ ಮಾತನ್ನು ಕೇಳಿ ದಶರಥನು ಸಂತೋಷಪಟ್ಟು ವಸಿಷ್ಠಾದಿಗಳೊಂದೊಡಗೂಡಿ ಚತುರಂಗಬಲದೊಡನೆ ವಿದೇಹರಾಜ್ಯಕ್ಕೆ ಹೊರಟು ಮಿಥಿಲಾಪಟ್ಟಣವನ್ನು ಸೇರಲು, ಜನಕರಾಜನು ದಶರಥನನ್ನು ಬಹುಸಂಭ್ರಮದಿಂದ ಎದುರ್ಗೊಂಡು ವಿವಾಹಮಹೋತ್ಸವವನ್ನು ನಡೆಸಿಕೊಡಬೇಕೆಂದು ನುಡಿದನು.



ಏವಮುಕ್ತ್ವಾ ನರಶ್ರೇಷ್ಠೋ ರಾಜ್ಞಾಂ ವಚ್ಛೈಮಹಾತ್ಮನಾ । ಶ್ರುತ್ವಾ ...

S. K. L.

ಬಾಲಕಾಂಡ - ೭೦ ನೇ ಸರ್ಗ

ಜನಕರಾಜನು ಶ್ರೇಷ್ಠನಾದ ಕುಶಧ್ವಜನೊಡನೆ ಸಭೆಯಲ್ಲಿ ಕುಳಿತುಕೊಂಡು ದಶರಥರಾಯನಿಗೆ ಹೇಳಿ ಕಳುಹಿಸಲು, ಆತನು ವಸಿಷ್ಠ ವಿಶ್ವಾಮಿತ್ರ ಮುಂತಾದವರೊಡನೆ ಸಭೆಗೆ ಬಂದು ಕುಳಿತು ಕನ್ಯಾವರಕ ಪ್ರಸ್ತಾಪವನ್ನೆಲ್ಲಾ ವಸಿಷ್ಠರು ತಿಳಿಸುವರೆಂದು ಹೇಳಲು, ಅವರು ಅದೇ ರೀತಿಯಲ್ಲಿ ಹೇಳಿ ಇಂತಹ ಮಹಿಮೆಯುಳ್ಳ ರಾಮಲಕ್ಷ್ಮಣರಿಗೆ ನಿಮ್ಮ ಪುತ್ರಿಯರನ್ನು ನಂಗು ವರಿಗಾಗಿ ಒಪ್ಪಿಸಬೇಕೆಂದು ಕೇಳಿದರು



ಏವಂ ಬ್ರುವಾಣಂ ಜನಕಃ ಪ್ರತ್ಯುವಾಚ ಕೃತಾಂಜಲಿಃ। ಶ್ರೋತುಮರ್ಹಸಿ ಭದ್ರಂತೇ ಕುಲಂನಃ ಪರಿಕೀರ್ತಿತಂ॥

J.K.L.

ಬಾಲಕಾಂಡ - ೭೧ ನೇ ಸರ್ಗ.

ಜನಕರಾಜನು ವಸಿಷ್ಠಮುನಿಯನ್ನು ಕುರಿತು ತನ್ನ ವಂಶವಿಸ್ತಾರವನ್ನೆಲ್ಲಾ ಹೇಳಿ ತನ್ನ ಪುತ್ರಿಯರಾದ ಸೀತೋರ್ಮಿಳೆಯರನ್ನು ರಾಮಲಕ್ಷ್ಮಣರಿಗೆ ವಿವಾಹಮಾಡಿಕೊಡುವುದಾಗಿ ತಿಳುಹಿಸಿದನು.



ಬಾಲಕಾಂಡ - ೭೨ ನೇ ಸರ್ಗ

ರಾಮಲಕ್ಷ್ಮಣರಿಗೆ ಸೀತೋರ್ಮಿಳೆಗಳನ್ನು ವಿವಾಹಮಾಡಿಕೊಡುತ್ತೇನೆಂದು ಜನಕರಾಜನು ಹೇಳುತ್ತಿರಲು ಜನಕನ ತಮ್ಮನಾದ ಕುಶಧ್ವಜನ ಮಕ್ಕಳಾದ ಮಾಂಡವೀ ಶ್ರುತಕೀರ್ತಿಯರನ್ನು ಭರತ ಶತ್ರುಘ್ನರಿಗೆ ವಿವಾಹಮಾಡಿಕೊಡಬಹುದೆಂದು ವಿಶ್ವಾಮಿತ್ರರು ಜನಕ ರಾಜನಿಗೆ ತಿಳುಹಿಸಿದರು



ಸಗತ್ವಾನಿಲಯಂ ರಾಜಾ ಶ್ರಾದ್ಧಂ ಕೃತ್ವಾ ವಿಧಾನತಃ। ಪ್ರಭಾತಕಾಲ್ಯಮುತ್ಥಾಯ ಚಕ್ರೇ ಗೋದಾನಮುತ್ತಮಂ॥

S.K.L.

ಬಾಲಕಾಂಡ - ೭೨ ನೇ ಸರ್ಗ.

ವಸಿಷ್ಠರು ದಶರಥರಾಯನಿಂದ ಮಕ್ಕಳ ವಿವಾಹಸಂಬಂಧವಾದ ನಾಂದೀಶ್ರಾದ್ಧ ಮುಂತಾದುವುಗಳನ್ನು ಮಾಡಿಸಿದರು.

ಇಯಂ ಸೀತಾ ಮಮ ಸುತಾ ಸಹಧರ್ಮಚರೀ ತವ । ಪ್ರತೀಚ್ಛ ಚೈನಾಂ ಭದ್ರಂ ತೇ ಪಾಣಿಂ ಗೃಹ್ಣೀಷ್ವ ಪಾಣಿನಾ ॥

ಬಾಲಕಾಂಡ - ೭೩ ನೇ ಸರ್ಗ

ಜನಕರಾಯನು ತನ್ನ ಮಗಳಾದ ಸೀತಾದೇವಿಯನ್ನು ಭಗವಂತನಾದ ಶ್ರೀರಾಮನಿಗೆ ವಿವಾಹ ಮಾಡಿ ಕೊಟ್ಟನು.

S.K.L.

ಬಾಲಕಾಂಡ-೭೩ ನೇ ಸರ್ಗ (೨)

ಜನಕರಾಯನು ಸೀತಾದೇವಿಯನ್ನು ಶ್ರೀರಾಮನಿಗೆ ಮಂತ್ರೋದಕಪೂರ್ವಕವಾಗಿ ವಿವಾಹಮಾಡಿಕೊಟ್ಟು ಮಗಳಾದ ಊರ್ಮಿಳೆಯನ್ನು ಲಕ್ಷ್ಮಣನಿಗೂ ತನ್ನ ತಮ್ಮನಾದ ಕುಶಧ್ವಜನ ಮಕ್ಕಳಾದ ಮಾಂಡವೀಶ್ರುತಕೀರ್ತಿಗಳನ್ನು ಭರತಶತ್ರುಘ್ನರಿಗೂ ವಿವಾಹಮಾಡಿಕೊಟ್ಟನು.



ದದರ್ಶ ಭೀಮಸಂಕಾಶಂ ಜಟಾಮಂಡಲ ಧಾರಿಣಂ। ಭಾರ್ಗವಂ ಜಾಮದಗ್ನ್ಯಂ ತಂ ರಾಜರಾಜ ವಿಮರ್ದನಂ

ಬಾಲಕಾಂಡ-೭೪ನೇ ಸರ್ಗ

ವಿವಾಹವಾದ ಮಕ್ಕಳೊಂದನೆ ದಶರಥರಾಯನು ಸೈನ್ಯಸಮೇತನಾಗಿ [illegible] ಪಟ್ಟಣಕ್ಕೆ ತಿರುಗಿ ಪ್ರಯಾಣ ಮಾಡುತ್ತಿರಲು, ದಾರಿಯಲ್ಲಿ ಕ್ಷತ್ರಿಯಕುಲನಾಶಕನಾದ ಪರಶುರಾಮನನ್ನು ಕಂಡು [illegible] [illegible] ತಪಸ್ವಿಯಾದ ಆ ಪರಶುರಾಮನಿಗೆ ವಸಿಷ್ಠಾದಿಗಳು ಅರ್ಘ್ಯಪಾದ್ಯಾದಿಗಳನ್ನು ಕೊಟ್ಟು ಪೂಜಿಸಿದರು.



ತದಿದಂ ಘೋರಸಂಕಾಶಂ ಜಾಮದಗ್ನ್ಯಂ ಮಹದ್ಧನುಃ। ಪೂರಯಸ್ವ ಶರೇಣೈವ ಸ್ವಬಲಂ ದರ್ಶಯಸ್ವ ಚ॥ ಶ್ಲೋ ೪

S.K.L.

ಬಾಲಕಾಂಡ - ೭೫ನೇ ಸರ್ಗ

ಭೀತನಾದ ದಶರಥರಾಜನು ಅಂಜಲಿಬದ್ಧನಾಗಿ ಮಕ್ಕಳಿಗೆ ಅಭಯಕೊಡಬೇಕೆಂದು ಕೇಳಿಕೊಳ್ಳುತ್ತಿದ್ದರೂ ಗಮನಿಸದೆ ಪರಶುರಾಮನು ಋಷಿಗಳು ಕೊಟ್ಟ ಅರ್ಘ್ಯ ಪಾದ್ಯಾದಿಗಳನ್ನು ಸ್ವೀಕರಿಸಿ ಶ್ರೀರಾಮನನ್ನು ಕುರಿತು ಶಿವಧನುರ್ಭಂಗವನ್ನು ಮಾಡಿದ ಶೌರ್ಯವನ್ನು ತನ್ನಲ್ಲಿರುವ ವೈಷ್ಣವ ಕೋದಂಡದಲ್ಲಿ ಶರಸಂಧಾನಮಾಡಿ ತೋರಿಸಬೇಕೆಂದು ಹೇಳಿದನು.



ಸ ಹತೌಜಾ ದೃಪ್ತರಾಮೇಣ ಸ್ವರ್ಗಲೋಕಾನ್ಪ್ರಸಾದತಃ । ಜಾಮದಗ್ನ್ಯೋ ಜಗಾಮಾಶು ಮಹೇಂದ್ರಂ ಪರ್ವತೋತ್ತಮಂ ॥

S.K.L

ಬಾಲಕಾಂಡ - ೭೬ನೇ ಸರ್ಗ.

ಪರಶುರಾಮನ ಗರ್ವದ ಮಾತನ್ನು ಕೇಳಿ ಶ್ರೀರಾಮನು ಕೂಡಲೇ ಆತನಿಂದ ವೈಷ್ಣವ ಕೋದಂಡವನ್ನು ತೆಗೆದುಕೊಂಡು ಶರಸಂಧಾನಮಾಡಿ ಬಿಡುತ್ತಿರಲು, ಪರಾಜಿತನಾದ ಪರಶುರಾಮನು ವೀರ್ಯಹೀನನಾಗಿ ಶ್ರೀರಾಮನನ್ನು ಸ್ತುತಿಸಿ ಹೊರಟುಹೋದನು.

ಅಯಂ ಕೇಕಯರಾಜಸ್ಯ ಪುತ್ರೋ ವಸತಿ ಪುತ್ರಕ । ತ್ವಾಂ ನೇತುಮಾಗತೋ ವೀರ ಯುಧಾಜಿನ್ಮಾತುಲಸ್ತವ ॥

ಬಾಲ ಕಾಂಡ- ೭೭ನೇ ಸರ್ಗ

ಪರಶುರಾಮನು ಪರಾಜಿತನಾಗಿ ಹೊರಟುಹೋಗಲು, ದಶರಥನು ಸಂತೋಷದಿಂದ ಅಯೋಧ್ಯಾಪಟ್ಟಣವನ್ನು ಸೇರಿ ಪುತ್ರರಿಂದಲೂ ಸೊಸೆಯರಿಂದಲೂ ಕೂಡಿಕೊಂಡು ಆನಂದಪಡುತ್ತಿದ್ದು ಒಂದು ದಿನ ತನ್ನ ಮೈದುನನಾದ ಯುಧಾಜಿದ್ರಾಜನು ಅಪೇಕ್ಷಿಸಿದಮೇರೆಗೆ ಮಗನಾದ ಭರತನನ್ನು ಅವನೊಡನೆ ಹೋಗಬಾರೆಂದು ಹೇಳಿದನು. ಭರತನು ಶತ್ರುಘ್ನಸಹಿತನಾಗಿ ತನ್ನ ಸೋದರಮಾವನೊಡನೆ ಹೊರಟು ಹೋದನು.